
Swabhimani Sahakari
Pages : 32 /12₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 18
Issue - 08
August - 2021

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ



"ಎಲ್ಲಾ ವರ್ಗದವರಿಗೂ ಯೋಜನೆಗಳನ್ನು ರೂಪಿಸಿದ್ದು ಕೃಷಿ, ಆರೋಗ್ಯ, ನಗರ ಮತ್ತು ಗ್ರಾಮೀಣ ಅಭಿವೃದ್ಧಿ, ಸ್ಮಾರ್ಟ್ ಸಿಟಿ ಯೋಜನೆ ಜಾರಿಗೊಳಿಸಲಾಗಿದೆ"

–ಬಸವರಾಜ ಬೊಮ್ಮಾಯಿ,ಮುಖ್ಯಮಂತ್ರಿಗಳು



75ನೇ ಅಮೃತ ಮಹೋತ್ಸವ ಸಂಭ್ರಮ



ಆಗಸ್ಟ್ 20
ವರಮಹಾಲಕ್ಷ್ಮೀ ವ್ರತ

ಆಗಸ್ಟ್ 20
ಮೋಹರಂ



ಆಗಸ್ಟ್ 30
ಕೃಷ್ಣ ಜನ್ಮಾಷ್ಟಮಿ

ಸೌಹಾರ್ದ ಸಹಕಾರಿಗಳ ಸಂಖ್ಯೆ : 5339

ಇ–ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1399



"ಪ್ರಾಮಾಣಿಕತೆಯನ್ನು ಬಿಟ್ಟುಕೊಡಲಿಲ್ಲ, ಸ್ವಾಭಿಮಾನವನ್ನು ಕಳೆದುಕೊಳ್ಳಲಿಲ್ಲ, ನನ್ನ ಬೆಳವಣಿಗೆಗೆ ಅದೇ ಕಾರಣ"

–ಎಸ್.ಟಿ.ಸೋಮಶೇಖರ್, ಸಹಕಾರ ಸಚಿವರು

# 97ನೇ ಸಂವಿಧಾನ ತಿದ್ದುಪಡಿ ಗುಜರಾತ ಶ್ರೇಷ್ಠ ನ್ಯಾಯಾಲಯದ ತೀರ್ಪು ಎತ್ತಿ ಹಿಡಿದ ಉಚ್ಚನ್ಯಾಯಾಲಯದ ತೀರ್ಪು : ತೀರ್ಪಿನ ಬಗ್ಗೆ ಕೇಂದ್ರದ ನಡೆಯತ್ತ ಸಹಕಾರಿಗಳ ಗಮನ.



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

> ಈ ದೇಶದ ಸಹಕಾರ ಚಳುವಳಿ 117 ವರ್ಷಗಳ ಇತಿಹಾಸವನ್ನು ಹೊಂದಿದೆ. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತ ಬಂದಿದೆ. ಅನೇಕ ಏರು ಪೇರುಗಳನ್ನು ಕಂಡಿದೆಯಾದರೂ ತನ್ನ ಮಹತ್ವವನ್ನು ಕಳೆದುಕೊಂಡಿರುವುದಿಲ್ಲ. ದೇಶದ ಆರ್ಥಿಕ ಕಷ್ಟಕಾಲದಲ್ಲೂ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸಬಲ್ಲವು ಎಂಬುದನ್ನು ಸಾಬೀತು ಮಾಡಿದೆ. ಉತ್ತಮ ರಾಷ್ಟ್ರ ನಿರ್ಮಾಣದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತ ಬಂದಿವೆ.

**ಆತ್ಮೀಯರೇ,**

ಆತ್ಮೀಯ ಎಲ್ಲಾ ಸಹಕಾರಿಗಳಿಗೆ 74ನೇ ಸ್ವಾತಂತ್ರೋತ್ಸವ ದಿನಾಚರಣೆ, ವರಮಹಾಲಕ್ಷ್ಮಿ ಪೂಜೆ, ಶ್ರೀ ಕೃಷ್ಣ ಜನ್ಮಾಷ್ಟಮಿ ಮತ್ತು ಮೋಹರಂ ಹಬ್ಬಗಳ ಶುಭಾಶಯಗಳು.

ಈ ದೇಶದ ಸಹಕಾರ ಚಳುವಳಿ 117 ವರ್ಷಗಳ ಇತಿಹಾಸವನ್ನು ಹೊಂದಿದೆ. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತ ಬಂದಿದೆ. ಅನೇಕ ಏರು ಪೇರುಗಳನ್ನು ಕಂಡಿದೆಯಾದರೂ ತನ್ನ ಮಹತ್ವವನ್ನು ಕಳೆದುಕೊಂಡಿರುವುದಿಲ್ಲ. ದೇಶದ ಆರ್ಥಿಕ ಕಷ್ಟಕಾಲದಲ್ಲೂ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸಬಲ್ಲವು ಎಂಬುದನ್ನು ಸಾಬೀತು ಮಾಡಿದೆ. ಉತ್ತಮ ರಾಷ್ಟ್ರ ನಿರ್ಮಾಣದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತ ಬಂದಿವೆ.

1912ರಲ್ಲಿ ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಈ ಕ್ಷೇತ್ರವನ್ನು ಇನ್ನಷ್ಟು ಬಲಪಡಿಸುವುದಕ್ಕಾಗಿ ಈ ಕ್ಷೇತ್ರದ ಸ್ವಾಯತ್ತತೆಯನ್ನು ಹೆಚ್ಚಿಸುವುದಕ್ಕಾಗಿ 97ನೇ ಸಂವಿಧಾನ ತಿದ್ದುಪಡಿ ಜಾರಿಗೆ ಬಂದಿತು. ಇದರಲ್ಲಿ ಸಹಕಾರಿ ಸಂಸ್ಥೆಗಳನ್ನು ಹುಟ್ಟು ಹಾಕುವುದು ಈ ದೇಶದ ನಾಗರೀಕರ ಹಕ್ಕು, ಸಹಕಾರಿಗಳಿಗೆ ವ್ಯವಹಾರಿಕ ಸ್ವಾತಂತ್ರ, ಆಡಳಿತ ಯಂತ್ರ ಪಾರದರ್ಶಕವಾಗಿರಬೇಕು ಮತ್ತು ವೃತ್ತಿಪರ ಆಡಳಿತಕ್ಕೆ ಒತ್ತು, ಮಹಿಳೆಯರಿಗೆ ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜನಾಂಗದವರಿಗೆ ಆಡಳಿತ ಮಂಡಳಿಯಲ್ಲಿ 2 ಸ್ಥಾನಗಳು ಮೀಸಲು, ಪ್ರತ್ಯೇಕ ಚುನಾವಣಾ ಪ್ರಾಧಿಕಾರದ ರಚನೆ ಮತ್ತು ಸನ್ನದು ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆ ಮುಂತಾದ ಹಲವು ಮಹತ್ವ ತಿದ್ದುಪಡಿಗಳನ್ನು ಅಳವಡಿಸಲಾಗಿತ್ತು ಇದರಿಂದಾಗಿ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಅವಕಾಶಗಳನ್ನು ಒದಗಿಸಿದಂತಾಗಿತ್ತು.

ಈ ತಿದ್ದುಪಡಿಯನ್ನು ದೇಶದ ಎಲ್ಲ ರಾಜ್ಯಗಳು ತಮ್ಮ ತಮ್ಮ ಸಹಕಾರ ಕಾಯ್ದೆಗಳಲ್ಲಿ ಅಳವಡಿಸಿಕೊಳ್ಳುವ ಒಂದು ವರ್ಷದ ಅವಧಿಯನ್ನು ನೀಡಲಾಗಿತ್ತು ಅದರಂತೆ ಎಲ್ಲ ರಾಜ್ಯಗಳು ತಮ್ಮ ಸಹಕಾರ ಕಾಯ್ದೆಯಲ್ಲಿ 97ನೇ ಸಂವಿಧಾನ ತಿದ್ದುಪಡಿಯಂತೆ ಅಗತ್ಯ ಬದಲಾವಣೆಗಳನ್ನು ಮಾಡಿಕೊಂಡವು. ಆದರೆ ಗುಜರಾತ ಸರಕಾರವು ಒಪ್ಪಲಿಲ್ಲ. ಸಂವಿಧಾನದ 7ನೇ ಪರಿಚ್ಛೇದದ ರಾಜ್ಯ ಪಟ್ಟಿ 32ರ ಪ್ರಕಾರ ಸಹಕಾರ ರಾಜ್ಯಗಳ ವಿಷಯ. ಕನಿಷ್ಠ 50% ರಾಜ್ಯ ಸರಕಾರಗಳ ಸಮ್ಮತಿ ಪಡೆಯದೇ ಈ ತಿದ್ದುಪಡಿ ಮಾಡಿರುವುದರಿಂದ ಇದು ಅಸಿಂಧುವಾಗುತ್ತದೆ ಎಂದು ಗುಜರಾತ್ ಶ್ರೇಷ್ಠ ನ್ಯಾಯಾಲಯದಲ್ಲಿ ಕೇಸ್ ದಾಖಲಿಸಿತ್ತು. ಗುಜರಾತ ಶ್ರೇಷ್ಠ ನ್ಯಾಯಾಲಯ 97ನೇ ಸಂವಿಧಾನ ತಿದ್ದುಪಡಿಯನ್ನು ಅಸಿಂಧು ಎಂದು ಘೋಷಿಸಿತ್ತು. ಈ ತೀರ್ಪನ್ನು ಕೇಂದ್ರ ಸರಕಾರದ ವತಿಯಿಂದ ಉಚ್ಚ ನ್ಯಾಯಾಲಯದಲ್ಲಿ ಕೇಸ್ ದಾಖಲಿಸಲಾಗಿತ್ತು. ಉಚ್ಚನ್ಯಾಯಾಲಯದ ತ್ರಿಸದಸ್ಯ ಪೀಠವು ದಿನಾಂಕ 19.07.2021 ರಂದು ಗುಜರಾತ ಹೈಕೋರ್ಟಿನ ತೀರ್ಪನ್ನು ಎತ್ತಿ ಹಿಡಿದಿದೆ. ಈ ತೀರ್ಪಿನ ಬಗ್ಗೆ ಕೇಂದ್ರ ಸರಕಾರದ ನಡೆಯತ್ತ ಸಹಕಾರಿಗಳು ಗಮನ ಹರಿಸಿದ್ದಾರೆ.

ಇದೇ ಸಂದರ್ಭದಲ್ಲಿ ಸಹಕಾರ ಕ್ಷೇತ್ರವನ್ನು ಬಲಪಡಿಸುವುದಕ್ಕಾಗಿ ಕೇಂದ್ರದಲ್ಲಿ ನೂತನವಾಗಿ ಸಹಕಾರ ಸಚಿವಾಲಯವನ್ನು ರಚನೆ ಮಾಡಿ ಸಮರ್ಥರಾದ ಶ್ರೀ ಅಮಿತ ಶಾ ಇವರನ್ನು ಕ್ಯಾಬಿನೆಟ್ ಸಚಿವರನ್ನಾಗಿ ಹಾಗೂ ಶ್ರೀ ಬಿ.ಎಲ್.ವರ್ಮಾರವರನ್ನು ರಾಜ್ಯ ಸಚಿವರನ್ನಾಗಿ ನೇಮಕ ಮಾಡಿರುವುದು ಸಹಕಾರಿಗಳಿಗೆ ಸಂತಸವನ್ನು ಹಾಗೂ ಬಲವನ್ನು ತಂದಿದೆ. ಸಹಕಾರ ಕ್ಷೇತ್ರಕ್ಕೆ ಕೇಂದ್ರ ಸರಕಾರ ಹೆಚ್ಚಿನ ಮಹತ್ವವನ್ನು ನೀಡಿರುವುದು ಈ ಕ್ರಮದಿಂದ ಸ್ಪಷ್ಟವಾಗುತ್ತದೆ. ಈ ಸಚಿವಾಲಯವು ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ದಿಟ್ಟ ಹೆಜ್ಜೆಗಳನ್ನು ಇಡಲು ಸಮರ್ಥವಾಗಿದೆ. ಎಲ್ಲ ರೀತಿಯ ಸಮಸ್ಯೆಗಳಿಗೆ ಸ್ಪಂದಿಸುವ ಭರವಸೆಯನ್ನು ಹೊಂದಿದೆ ಎಂದು ಸಹಕಾರಿಗಳ ಆಶಯವಾಗಿದೆ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ.......... 2
ಸಂಪಾದಕೀಯ.......... 3
ಜ್ಞಾನ ಜ್ಯೋತಿ.......... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .......... 05–20
ಸರ್ಕಾರದ ಸುತ್ತೋಲೆ .......... 21–23
ಸಮಾಲೋಚನಾ ಸಭೆಯ ಪ್ರಶ್ನೆಗಳು ಹಾಗೂ ಉತ್ತರಗಳು .......... 24–25
ಸೌಹಾರ್ದ ಸಹಕಾರಿಗಳ ಸಮಾಚಾರಗಳು .......... 26
**ಲೇಖನಗಳು :**
ಭಾರತದಲ್ಲಿ ಸಾಸ್ಥಿಕ ಹಣಕಾಸು – ಸಮಸ್ಯೆಗಳು – ಮುಂದಿನ ದಾರಿ .......... 27–29
ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ–16) .......... 30–31

# ಸಂಪಾದಕೀಯ

## ಠೇವಣಿ ಸುರಕ್ಷಾ ಯೋಜನೆ : ತಜ್ಞರ / ಸಹಕಾರಿಗಳ ಅಭಿಪ್ರಾಯ ಪಡೆದು ಜಾರಿಗೆ ಚಿಂತನೆ.

ದೇಶದಲ್ಲಿ ಕೋವಿಡ್–19 2ನೇ ಅಲೆ ಮುಕ್ತಾಯ ಹಂತದಲ್ಲಿದೆ. ದೇಶದ ಆರ್ಥಿಕ ಸಾಮಾಜಿಕ ಶೈಕ್ಷಣಿಕ ಧಾರ್ಮಿಕ ಚಟುವಟಿಕೆಗಳು ಗರಿಗೆದರುತ್ತಿರುವುದು ಸಮಾಧಾನಕರ ವಿಷಯ. ಅದರಂತೆ ಸಹಕಾರ ಕ್ಷೇತ್ರದಲ್ಲೂ ಹೆಚ್ಚಿನ ಕಾರ್ಯಚಟುವಟಿಕೆಗಳು ಪ್ರಾರಂಭವಾಗಿರುವುದು ಸಂತೋಷದ ವಿಷಯ.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿ ಉತ್ತಮವಾಗಿದೆ. ರಾಜ್ಯದ ಸೌಹಾರ್ದ ಸಹಕಾರಿಗಳ ಸಂಖ್ಯೆ 5339ಕ್ಕೆ ತಲುಪಿದೆ. ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳು ವಿಭಿನ್ನವಾಗಿ ಉತ್ತಮವಾಗಿದ್ದರೂ ಸಹ ಬೆರಳೆಣಿಕೆಯಷ್ಟು ಸಹಕಾರಿಗಳು ಸಮಸ್ಯಾತ್ಮಕವಾಗಿ ಸದಸ್ಯರಿಗೆ ಠೇವಣಿಗಳನ್ನು ಹಿಂತಿರಿಸುವಲ್ಲಿ ವಿಫಲವಾಗುತ್ತಿರುವುದು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಒಂದು ಕಪ್ಪು ಚುಕ್ಕೆಯಾಗಿದೆ. ಇದು ದುರದೃಷ್ಟಕರ. ಈ ಬಗ್ಗೆ ಸಂಯುಕ್ತ ಸಹಕಾರಿ ಕಾರ್ಯೋನ್ಮುಖವಾಗಿದೆ. ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆ ಮಾಡುತ್ತಿದೆ. ಟಾಸ್ಕ್‌ಫೋರ್ಸ್ ರಚನೆ ಮಾಡಿದೆ. ತಪ್ಪಿತಸ್ಥ ಸಹಕಾರಿಗಳ ಮೇಲೆ ಕ್ರಮವಿಡುತ್ತಿರುವುದು ಸಹಕಾರಿಗಳಲ್ಲಿ ಜಾಗೃತಿಯನ್ನು ಮೂಡಿಸಿದೆ.

ಸೌಹಾರ್ದ ಸಹಕಾರಿಗಳ ನಡೆ ಗುಣಮಟ್ಟದ ಕಡೆ ಎಂಬ ಸಂಯುಕ್ತ ಸಹಕಾರಿಯ ಘೋಷವಾಕ್ಯವನ್ನು ಅರ್ಥಪೂರ್ಣವನ್ನಾಗಿಸುವ ನಿಟ್ಟಿನಲ್ಲಿ ಸೌಹಾರ್ದ ಸಹಕಾರಿಗಳಲ್ಲಿ ಸದಸ್ಯರು ಠೇವಣಿಗಳಿಗೆ ರಕ್ಷಣೆಯನ್ನು ಒದಗಿಸುವ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ "ಠೇವಣಿ ಸುರಕ್ಷಾ ಯೋಜನೆ" ಯೊಂದನ್ನು ಸಿದ್ಧಪಡಿಸಿದೆ. ಕೇರಳದಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಈ ಯೋಜನೆಯನ್ನು ಸಂಯುಕ್ತ ಸಹಕಾರಿಯು ಅಧ್ಯಯನ ಮಾಡಿ ಪ್ರಸ್ತಾವನೆಯನ್ನು ಸಿದ್ಧಪಡಿಸಿದೆ. ಈ ಪ್ರಸ್ತಾವನೆಯನ್ನು ಸಾಮಾನ್ಯ ಸಭೆಯ ಅನುಮೋದನೆಗಾಗಿ ಕಳೆದ 17ನೇ ಸಾಮಾನ್ಯ ಸಭೆಯಲ್ಲಿ ಮಂಡಿಸಲಾಗಿತ್ತು. ಸಾಮಾನ್ಯ ಸಭೆಯಲ್ಲಿ ತಜ್ಞರ ಅಭಿಪ್ರಾಯ ಪಡೆದು ಜಾರಿಗೊಳಿಸಲು ಕ್ರಮವಿಡಬಹುದಾಗಿದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಈ ಯೋಜನೆಯು ಠೇವಣಿದಾರ ಸದಸ್ಯರ ಹಿತ ಕಾಪಾಡುವ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದ್ದು ಈ ಯೋಜನೆಯ ಕರಡು ಪ್ರಸ್ತಾವನೆಯನ್ನು ವೆಬ್‌ಸೈಟ್‌ನಲ್ಲಿ ಇದರ ಬಗ್ಗೆ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರು ಅಧ್ಯಯನ ಮಾಡಿ ತಮ್ಮ ಸಲಹೆ / ಅಭಿಪ್ರಾಯ ಗಳನ್ನು ನೀಡಲು ಕೋರಿದೆ. ಸದಸ್ಯರ ಠೇವಣಿಗಳಿಗೆ ಭದ್ರತೆ ಒದಗಿಸುವುದೇ ಇದರ ಮುಖ್ಯ ಉದ್ದೇಶವಾಗಿರುವುದರಿಂದ ಸೌಹಾರ್ದ ಸಹಕಾರಿಗಳ ಸದಸ್ಯರು ಸಹ ಅನುಮೋದನೆ ನೀಡುವುದರಿಂದ ಹೆಚ್ಚಿನ ಸಹಕಾರಿಗಳ ಸಮ್ಮತಿಯು ದೊರೆತಲ್ಲಿ ಮುಂಬರುವ ಸಾಮಾನ್ಯ ಸಭೆಯ ಅನುಮೋದನೆ ಪಡೆದು ಜಾರಿಮಾಡುವುದರಿಂದ ಸೌಹಾರ್ದ ಸಹಕಾರಿಗಳಲ್ಲಿ ಇದೊಂದು ವಿನೂತನ ವಿಶ್ವಾಸಾರ್ಹ ಯೋಜನೆ ಜಾರಿಗೆ ಬಂದಂತಾಗುತ್ತದೆ. ಸೌಹಾರ್ದ ಸಹಕಾರಿ ಕ್ಷೇತ್ರ ಗುಣಮಟ್ಟ ಮತ್ತು ವಿಶ್ವಾಸಾರ್ಹತೆ ಹೆಚ್ಚಿಸಲು ಇದೊಂದು ಮೈಲುಗಲ್ಲಾಗುತ್ತದೆ.

# "ಒಳ್ಳೆಯವರು ಕೆಟ್ಟವರು ಸದಾಕಾಲಕ್ಕೂ ಇದ್ದವರೇ ಹಾಗೂ ಇರುವವರೇ"

ಭಗವಂತನ ಸೃಷ್ಟಿಯಲ್ಲಿ ಒಳ್ಳೆಯದು ಕೆಟ್ಟದ್ದೆಂಬುದು ಎಲ್ಲ ಕಾಲದಲ್ಲೂ ಇತ್ತೆಂದು ಪುರಾಣ ಗ್ರಂಥಗಳಾದ ರಾಮಾಯಣ ಮಹಾಭಾರತಗಳಲ್ಲಿ ಮೂಡಿ ಬರುವ ಪಾತ್ರಗಳಿಂದಲೇ ವ್ಯಕ್ತವಾಗುವ ಅಂಶವಾಗಿರುವುದರಿಂದ ಪ್ರಸಕ್ತ ಸಮಾಜದಲ್ಲಿಯೂ ಒಳ್ಳೆಯವರು ಕೆಟ್ಟವರು ಇದ್ದೇ ಇರುತ್ತಾರೆನ್ನುತ್ತಾ ಅಂತಹದ್ಯಾವುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೇ ವ್ಯಕ್ತಿಯು ತನ್ನಷ್ಟಕ್ಕೆ ತಾನು ರಾಮಭಂಟ ಹನುಮಂತನಂತೆ ಕಾರ್ಯಶೀಲನಾಗಬೇಕೆಂದು ಆಧ್ಯಾತ್ಮ ಕವಿ ಡಿ.ವಿ.ಜಿಯವರು ಈ ಕೆಳಗಿನ ಪದ್ಯದಲ್ಲಿ ಕರೆಕೊಡುತ್ತಿದ್ದಾರೆ. ಜೀವನವೆಂಬುದು ಒಳಿತುಕೆಡುಕುಗಳ ಮಿಶ್ರಣ ಆದಾಗ್ಯೂ ಅದರಲ್ಲಿನ ಒಳ್ಳೆಯದನ್ನು ಆಯ್ದುಕೊಂಡು ಬದುಕನ್ನು ಪ್ರಗತಿಯತ್ತ ಕೊಂಡೊಯ್ಯುವುದು ಸಜ್ಜನರ ಕರ್ತವ್ಯವೆನ್ನುತ್ತಾ ಕೆಟ್ಟವಂದ್ದಾರೆಂಬ ಕಾರಣದಿಂದ ಕಾರ್ಯಸ್ಥಗಿತ ಮಾಡುವುದು ಸರಿಯಲ್ಲವೆಂದೂ ಇರುವ ಕೇಡಿನ ಅಂಶಗಳನ್ನು ಪರಿಹರಿಸಿಕೊಂಡು ಮುನ್ನುಗ್ಗಲು ಕರೆಕೊಡುತ್ತಿದ್ದಾರೆ.

ರಾಮನಿರ್ದಂದು ರಾವಣನೊಬ್ಬ ನಿದ್ದವಲ
ಭೀಮನಿರ್ದಂದು ದುಶ್ಯಾಸನ ನವನೋರ್ವನ್
ಈ ಮಹಿಯೊಳನ್ಯಾಯಕಾರಿಯಿಲ್ಲದುದೆಂದು?
ರಾಮಭಟನಾಗು ನೀಂ ॥ಮಂಕುತಿಮ್ಮ॥

ಉಚ್ಛನೀಚ ಸ್ವಭಾವದ ವ್ಯಕ್ತಿಗಳು ಸದಾಕಾಲಕ್ಕೆ ಇದ್ದರೆಂಬ ಅಂಶಕ್ಕೆ ಪುಷ್ಟಿ ನೀಡುತ್ತಾ ರಾಮಾಯಣದ ಉದಾಹರಣೆಯಾಗಿ ಏಕಪತ್ನೀ ವ್ರತಸ್ಥನಾದ ಶ್ರೀ ರಾಮನಿದ್ದಾಗ ವಿಷಯಲಂಪಟ, ವ್ಯಭಚಾರಿ ಮತ್ತು ಕಾಮುಕ ರಾವಣನಿದ್ದನೆಂದೂ ಮಹಾಭಾರತದ ಉದಾಹರಣೆಯಾಗಿ ಭೀಮನಿದ್ದಾಗ ದುರ್ಯೋಧನ, ದುಶ್ಯಾಸನ ಮತ್ತು ಕೀಚಕರಂಥಹ ಕಂತಕಪ್ರಾಯರಿದ್ದರಿಂದ ಯಾವುದೇ ಕಾಲದಲ್ಲಿಯೂ "ದುಷ್ಟವ್ಯಕ್ತಿಯುಕ್ತ" ಸಮಾಜ ವಿರಲಿಲ್ಲವಾದ್ದ-ರಿಂದ ಜಾಲಿಯ ಮುಳ್ಳಿನಂಥಹ ಚುಚ್ಚುವ್ಯಕ್ತಿಗಳು ಇದ್ದರೂ ಸಹ ಪರಿಹಾರೋಪಾಯ ಕಂಡುಕೊಂಡು ತಮ್ಮ ಪಥದಲ್ಲಿ ಪ್ರಯತ್ನಶೀಲರಾಗಲು ನಿರ್ದೇಶನ ನೀಡಲಾಗಿದೆ.

ಶ್ರೇಣಿ 64



## ಜ್ಞಾನ ಜ್ಯೋತಿ

ಎಂ. ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

ರಾಮಾಯಣದ ಹನುಮಂತನು ಸಮುದ್ರ ಲಂಘನ ಮಾಡಿ ಸೀತಾನ್ವೇಷಣೆ ಕೈಕೊಳ್ಳುವ ಸಂದರ್ಭದಲ್ಲಿ ಅನೇಕ ದುಷ್ಟರನ್ನು ಸದೆ ಬಡಿಯಬೇಕಾಯಿತು. ಹೋರಾಡಬೇಕಾಯಿತು. ಆದಾಗ್ಯೂ ಹನುಮಂತನ ಹೃದಯೊಂತರಾಳದಲ್ಲಿ ರಾಮನಾಮದ ಶುದ್ಧ ಮಂತ್ರದ ತೀವ್ರತೆಯಿಂದ ಕಾರಣ ಬಂದ ಕಷ್ಟಗಳನ್ನೆಲ್ಲಾ ಸಾಸಿವೆ ಕಾಳಿನಂತೆ ಪರಿಹರಿಸಿಕೊಂಡು ತನಗೆ ವಹಿಸಲಾದ ಕಾರ್ಯದಲ್ಲಿ ಉತ್ಕೃಷ್ಟ ಜಯವನ್ನು ಪಡೆಯುವುದರಲ್ಲಿ ಯಶಸ್ವಿಯಾಗುತ್ತಾನೆ. ಆಂತರ್ಯದ ಶುಭ ಚಿಂತನೆಯ ಕಾರಂಜಿ ಶಕ್ತಿಯು ಹೊರಗಿನ ದೈತ್ಯತನವನ್ನು ದಹಿಸಿ ಯಶಸ್ಸಿನತ್ತ ನಿಮ್ಮನ್ನು ಕೊಂಡೊಯ್ಯುತ್ತದೆಯನ್ನುತ್ತದೆ ಈ ಕಗ್ಗ.

ಆಂಗ್ಲ ಬರಹಗಾರ ಜೋಸೆಫ್ ಮರ್ಫಿಯವರು ಶುದ್ಧಮನಸ್ಸಿನ ಶಕ್ತಿಯ ಬಗ್ಗೆ ಪ್ರಸ್ತಾಪಿಸುತ್ತಾ **"when you sincerely aim at good, God will take you as his partner and there up on no force on earth and heaven can with hold you from success"** ಮನದಾಳದಲ್ಲಿ ಶುಭ ಉದ್ದೇಶವನ್ನು ಹೊಂದಿ ಕಾರ್ಯತತ್ವರನಾದಲ್ಲಿ ಅಂತಹನನ್ನು ಭಗವಂತನು ತನ್ನ ಪಾಲುದಾರನೆಂದು ಭಾವಿಸಿ ನಂತರದಲ್ಲಿ ಭೂಮ್ಯಾಕಾಶದಲ್ಲಿನ ಯಾವುದೇ ಶಕ್ತಿಗಳು ಅಂತಹವನಿಂದ ಯಶಸ್ಸನ್ನು ಕಸಿಯಲಾರವು ಎನ್ನುತ್ತಾ ಮಹತ್ಮಾಗಾಂಧೀ-ಜಿಯವರು ತನ್ನ ಉಕ್ತಿಗಳಲ್ಲಿ ನಮ್ಮ ಸರಿತಪ್ಪುಗಳನ್ನು ಅಂತ್ಯ ನಿರ್ಧರಿಸುತ್ತದೆಂದಿದ್ದಾರೆ ಆದ್ದರಿಂದ ಶುಭಚಿಂತನೆಯಿಂದ ಯಶಸ್ಸಿನತ್ತ ಮುನ್ನಡೆಯೋಣವೆನ್ನುತ್ತದೇ ಸಾರಾಂಶ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 16983 ಆಗಿರುತ್ತದೆ. ಇವುಗಳ ಪೈಕಿ 9235 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 7748.

**ಜುಲೈ ತಿಂಗಳ ಪ್ರಕರಣಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳು 660, ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 106.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 3005 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 307 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 170 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 2,552 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1022 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 103 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 477 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 442 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಜುಲೈ ತಿಂಗಳಿನಲ್ಲಿ 80 ಪ್ರಕರಣ ದಾಖಲಾಗಿರುತ್ತವೆ.

# ಶ್ರೀ ಬಸವರಾಜು ಬೊಮ್ಮಾಯಿಯವರ ಸಂಪುಟದ ನೂತನ ಸಚಿವರುಗಳು


ಶ್ರೀ ಗೋವಿಂದ ಕಾರಜೋಳ


ಶ್ರೀ ಕೆ.ಎಸ್ ಈಶ್ವರಪ್ಪ


ಶ್ರೀ ಆರ್. ಅಶೋಕ


ಶ್ರೀ ಬಿ. ಶ್ರೀ ರಾಮುಲು


ಶ್ರೀ ವಿ ಸೋಮಣ್ಣ


ಶ್ರೀ ಉಮೇಶ ಕತ್ತಿ


ಶ್ರೀ ಎಸ್ ಅಂಗಾರ


ಶ್ರೀ ಮಾಧುಸ್ವಾಮಿ


ಶ್ರೀ ಆರಗ ಜ್ಞಾನೇಂದ್ರ


ಶ್ರೀ ಡಾ. ಸಿ.ಎಸ್ ಅಶ್ವಥ್ ನಾರಾಯಣ,


ಶ್ರೀ ಸಿ.ಸಿ ಪಾಟೀಲ


ಶ್ರೀ ಆನಂದ್ ಸಿಂಗ್


ಶ್ರೀ ಕೋಟಾ ಶ್ರೀನಿವಾಸ್ ಪೂಜಾರಿ,


ಶ್ರೀ ಪ್ರಭು ಚೌವ್ಹಾಣ್


ಶ್ರೀ ಮುರುಗೇಶ್ ನಿರಾಣಿ


ಶ್ರೀ ಶಿವರಾಂ ಹೆಬ್ಬಾರ್


ಶ್ರೀ ಎಸ್. ಟಿ ಸೋಮಶೇಖರ್


ಶ್ರೀ ಬಿ.ಸಿ ಪಾಟೀಲ್


ಶ್ರೀ ಬೈರತಿ ಬಸವರಾಜು


ಶ್ರೀ ಗೋಪಾಲಯ್ಯ


ಶ್ರೀ ಕೆ. ಸುಧಾಕರ್


ಶ್ರೀ ಎಂ.ಟಿ.ಬಿ ನಾಗರಾಜ್


ಶ್ರೀ ಕೆ.ಸಿ ನಾರಾಯಣ ಗೌಡ


ಶ್ರೀ ಸುನೀಲ್ ಕುಮಾರ್


ಶ್ರೀ ಬಿ.ಸಿ ನಾಗೇಶ್


ಶ್ರೀ ಹಾಲಪ್ಪ ಆಚಾರ್


ಶ್ರೀ ಶಂಕರ್ ಪಾಟೀಲ್ ಮುನೇನಕೊಪ್ಪ


ಶ್ರೀ ಮುನಿರತ್ನ


ಶ್ರೀ ಶಶಿಕಲಾ ಜೊಲ್ಲೆ


## ಶ್ರೀ ಬಸವರಾಜು ಬೊಮ್ಮಾಯಿ ಸಂಪುಟದ ನೂತನ ಸಚಿವರು ಹಾಗೂ ಖಾತೆಗಳು

| | |
|---|---|
| ಶ್ರೀ ಬಸವರಾಜ ಬೊಮ್ಮಾಯಿ, ಮಾನ್ಯ ಮುಖ್ಯಮಂತ್ರಿಗಳು | DPAR, ಹಣಕಾಸು, ಗೃಹ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಗುಪ್ತಚರ (ಗೃಹ ಖಾತೆಯಿಂದ), ಸಂಪುಟ ವ್ಯವಹಾರ, |
| ನೂತನ ಸಚಿವರು | |
| ಶ್ರೀ ಅರಗ ಜ್ಞಾನೇಂದ್ರ, | ಗೃಹ (ಗುಪ್ತಚರ ಹೊರತುಪಡಿಸಿ) |
| ಶ್ರೀ ಗೋವಿಂದ ಎಂ ಕಾರಜೋಳ, | ಬೃಹತ್ ಹಾಗೂ ಮಧ್ಯಮ ನೀರಾವರಿ ಇಲಾಖೆ (ಜಲ ಸಂಪನ್ಮೂಲ) |
| ಶ್ರೀ ಡಾ. ಸಿ.ಎನ್ ಅಶ್ವಥ ನಾರಾಯಣ, | ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆ, ಹೆಚ್ಚುವರಿಯಾಗಿ ಕೌಶಲ್ಯಾಭಿವೃದ್ಧಿ |
| ಶ್ರೀ ಕೆ.ಎಸ್ ಈಶ್ವರಪ್ಪ, | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ |
| ಶ್ರೀ ಆರ್. ಅಶೋಕ, | ಕಂದಾಯ |
| ಶ್ರೀ ಉಮೇಶ್ ಕತ್ತಿ, | ಅರಣ್ಯ, ಆಹಾರ, ಪಡಿತರ ವಿತರಣೆ, ಗ್ರಾಹಕ ವ್ಯವಹಾರ |
| ಶ್ರೀ ಬಿ. ಶ್ರೀರಾಮುಲು, | ಸಾರಿಗೆ, ಎಸ್.ಟಿ ಅಭಿವೃದ್ಧಿ |
| ಶ್ರೀ ಬಿ. ಸಿ ನಾಗೇಶ್, | ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಸಕಾಲ |
| ಶ್ರೀ ವಿ ಸೋಮಣ್ಣ, | ವಸತಿ |
| ಶ್ರೀ ಸುನಿಲ್ ಕುಮಾರ್, | ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ |
| ಶ್ರೀ ಎಸ್ ಅಂಗಾರ, | ಬಂದರು, ಒಳನಾಡು ಸಾರಿಗೆ ಮತ್ತು ಮೀನುಗಾರಿಕೆ |
| ಶ್ರೀ ಕೋಟಾ ಶ್ರೀನಿವಾಸ ಪೂಜಾರಿ, | ಸಮಾಜ ಕಲ್ಯಾಣ, ಹಿಂದುಳಿದ ವರ್ಗ ಕಲ್ಯಾಣ |
| ಶ್ರೀ ಜೆ. ಸಿ ಮಾಧುಸ್ವಾಮಿ, | ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ |
| ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ, | ಲೋಕೋಪಯೋಗಿ |
| ಶ್ರೀ ಶಂಕರ್ ಬಿ, ಪಾಟೀಲ ಮುನ್ನೇನಕೊಪ್ಪ | ಜವಳಿ, ಸಕ್ಕರೆ |
| ಶ್ರೀ ಪ್ರಭು ಚೌಹಾಣ್, | ಪಶು ಸಂಗೋಪನೆ |
| ಶ್ರೀಮತಿ ಶಶಿಕಲಾ ಜೊಲ್ಲೆ ಅಣ್ಣಾ ಸಾಹೇಬ್, | ಮುಜರಾಯಿ, ಹಜ್ ಮತ್ತು ವಕ್ಫ್ |
| ಶ್ರೀ ಆನಂದ್ ಸಿಂಗ್, | ಪ್ರವಾಸೋದ್ಯಮ, ಪರಿಸರ |
| ಶ್ರೀ ಆಚಾರ್ ಹಾಲಪ್ಪ, | ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆ, ಹಿರಿಯ ನಾಗರಿಕರ ಸಬಲೀಕರಣ |
| ಶ್ರೀ ಕೆ. ಸಿ ನಾರಾಯಣ ಗೌಡ, | ಕ್ರೀಡೆ, ಯುವಜನ, ರೇಷ್ಮೆ |
| ಶ್ರೀ ಮುರುಗೇಶ್ ನಿರಾಣಿ, | ಬೃಹತ್ ಹಾಗೂ ಮಧ್ಯಮ ಕೈಗಾರಿಕೆ |
| ಶ್ರೀ ಅರೆಬೈಲು ಹೆಬ್ಬಾರ್ ಶಿವರಾಂ, | ಕಾರ್ಮಿಕ |
| ಶ್ರೀ ಎಸ್. ಟಿ ಸೋಮಶೇಖರ್, | ಸಹಕಾರ |
| ಶ್ರೀ ಬಸನಗೌಡ ಚನ್ನಬಸವನಗೌಡ ಪಾಟೀಲ್ | ಕೃಷಿ |
| ಶ್ರೀ ಬಿ.ಎ ಬಸವರಾಜ (ಬೈರತಿ), | ನಗರಾಭಿವೃದ್ಧಿ (ಬೆಂಗಳೂರು ಹೊರತುಪಡಿಸಿ) |
| ಶ್ರೀ ಡಾ. ಕೆ ಸುಧಾಕರ್, | ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ |
| ಶ್ರೀ ಕೆ ಗೋಪಾಲಯ್ಯ, | ಅಬಕಾರಿ |
| ಶ್ರೀ ಎನ್ ನಾಗರಾಜ (ಎಂ.ಟಿ.ಬಿ), | ಸಣ್ಣ ಕೈಗಾರಿಕೆ, ಸಾರ್ವಜನಿಕ ವಲಯ ಕೈಗಾರಿಕೆ |
| ಶ್ರೀ ಮುನಿರತ್ನ, | ತೋಟಗಾರಿಕೆ, ಯೋಜನೆ ಹಾಗೂ ಸಾಂಖ್ಯಿಕ |



# ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರರವರ ಕಾರ್ಯವೈಖರಿ ಮೆಚ್ಚಿ ಶ್ಲಾಘಿಸಿ ಪತ್ರ ಬರೆದ ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಶ್ರೀ ಅಮಿತ ಶಾ

ಕರ್ನಾಟಕದ ಸಹಕಾರ ಸಚಿವ ಶ್ರೀ ಎಸ್.ಟಿ. ಸೋಮಶೇಖರರವರ ಕಾರ್ಯವೈಖರಿಯನ್ನು ಮೆಚ್ಚಿ ಶ್ಲಾಘಿಸಿ ಪತ್ರ ಬರೆದ ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಶ್ರೀ ಅಮಿತ ಶಾ ರವರು ಕೇಂದ್ರದ ಮಹಾತ್ವಾಂಕಾಕ್ಷೆಯಾದ “ಸಹಕಾರದಿಂದ ಸಮೃದ್ಧಿ“ ಯೋಜನೆಯ ಬಗ್ಗೆ ಉಲ್ಲೇಖ ಮಾಡಿ ಈ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸಹಕಾರಗಳು ಕೂಡಿ ಕೆಲಸ ಮಾಡೋಣ ಎಂದು ತಿಳಿಸಿದ್ದಾರಲ್ಲದೆ ನಿಮ್ಮ ಎಲ್ಲಾ ಕಾರ್ಯಗಳಲ್ಲಿ ನಮ್ಮ ಸಂಪೂರ್ಣ ಸಹಕಾರವಿದೆ ಎಂದು ತಿಳಿಸಿದ್ದಾರೆ.



अमित शाह

डी.ओ. सं./D.O. No. 2107/HMP/2021

गृह मंत्री
एवं
सहकारिता मंत्री
भारत सरकार

21 JUL 2021

श्री सोमशेखर जी,

मेरे सहकारिता मंत्री बनने पर आपका शुभेच्छा पत्र प्राप्त कर प्रसन्नता हुई। माननीय प्रधानमंत्री नरेन्द्र मोदी जी ने '**सहकार से समृद्धि**' के स्वप्न को साकार करने के लिए '**सहकारिता मंत्रालय**' का गठन किया है। मुझे विश्वास है कि प्रधानमंत्री मोदी जी के इस ऐतिहासिक निर्णय से कृषि व ग्रामीण क्षेत्र में समृद्धि का एक नया सवेरा आएगा।

हमारे देश में सहकारिता आधारित आर्थिक विकास मॉडल बहुत प्रासंगिक है जहाँ प्रत्येक सदस्य अपनी जिम्मेदारी की भावना के साथ कार्य करता है। मुझे विश्वास है कि यह ऐतिहासिक निर्णय सहकारिता सेक्टर व उससे जुड़े लोगों को सशक्त करेगा और भारत के सहकारिता सेक्टर को नई ऊंचाइयों तक ले जाएगा।

आपकी शुभेच्छाएँ और विश्वास ही दायित्व निर्वहन की दिशा में मेरी ऊर्जा का अक्षय स्रोत है। आपके प्रेमपूर्ण शब्दों के प्रति मैं, हृदय से साधुवाद व्यक्त करता हूँ।

**धन्यवाद सहित,**

आपका,

**(अमित शाह)**

**श्री एस. टी. सोमशेखर,**
सहकारिता एवं मैसूर जिला प्रभारी मंत्री,
कर्नाटक सरकार,
कमरा संख्या-38 & 39, ग्राउंड फ्लोर,
विकास सौंध, बेंगलुरु - 560 001

**कार्यालय :** गृह मंत्रालय, नॉर्थ ब्लाक, नई दिल्ली-110001
**दूरभाष :** 23092462, 23094686, **फैक्स :** 23094221

## ಸೌಹಾರ್ದ ಸಹಕಾರಿಗಳ ಅಭಿನಂದನೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಹಾಗೂ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಪರವಾಗಿ ಸಹಕಾರ ಸಚಿವರಾದ ಶ್ರೀ ಎಸ್.ಟಿ ಸೋಮಶೇಖರ್ ರವರನ್ನು ಅಭಿನಂದಿಸಿದ್ದಾರೆ.

## ಸಹಕಾರ ಸಚಿವ ಶ್ರೀ ಎಸ್.ಟಿ ಸೋಮಶೇಖರವರ ಕಾರ್ಯದಕ್ಷತೆ ಮೆಚ್ಚಿ ಪಕ್ಷಾತೀತವಾಗಿ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿಯವರ ಸಮ್ಮುಖದಲ್ಲೇ ಶಾಸಕರ ಹೋಗಳಿಕೆಗಳ ಸುರಿಮಳೆ.



**ಮೈಸೂರು** : ದಿನಾಂಕ 10–8–2021ರಂದು ಮೈಸೂರಿನಲ್ಲಿ ಮಾನ್ಯ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮೈಸೂರಿನ ಶಾಸಕರು ಪಕ್ಷಾತೀತವಾಗಿ ಸಹಕಾರ ಸಚಿವ ಶ್ರೀ ಎಸ್.ಟಿ ಸೋಮಶೇಖರರವರ ಕಾರ್ಯನಿರ್ವಹಣೆ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಶ್ರೀ ಎಸ್.ಟಿ.ಸೋಮಶೇಖರರು ಮೈಸೂರು ಜಿಲ್ಲೆಯ ಉಸ್ತುವಾರಿ ಸಚಿವರಾಗಿ ಜಿಲ್ಲೆಯ ಅಭಿವೃದ್ಧಿ ಕಾಮಗಾರಿಗಳನ್ನು ವಿಶೇಷವಾಗಿ ಜನಸಾಮಾನ್ಯರ ಅಭಿವೃದ್ಧಿ ಪರ ಯೋಜನೆಗಳ ಅನುಷ್ಠಾನದಲ್ಲಿ ಕ್ರೀಯಾಶೀಲರಾಗಿ ಹೆಚ್ಚಿನ ಕಾಳಜಿಗಳನ್ನು ವಹಿಸುತ್ತಾರೆ. ಕೋವಿಡ್–19 ನಿರ್ವಹಣೆಯ ಬಗ್ಗೆ ಸಂಪೂರ್ಣ ಕಾಳಜಿ ವಹಿಸಿದ್ದಾರೆಂದು ಶಾಸಕರುಗಳು ತಿಳಿಸಿದರು. ಇದಕ್ಕೆ ಪ್ರತಿಯಾಗಿ ಸಹಕಾರ ಸಚಿವ ಶ್ರೀ ಎಸ್.ಟಿ. ಸೋಮಶೇಖರವರು ನನ್ನ ಎಲ್ಲ ಕಾರ್ಯಗಳಲ್ಲಿ ಸಂಪೂರ್ಣವಾಗಿ ಪಕ್ಷಭೇದ ಮರೆತು ಸಹಕರಿಸಿದ ಎಲ್ಲ ಶಾಸಕರಿಗೆ ಧನ್ಯವಾದಗಳನ್ನು ಸಲ್ಲಿಸುತ್ತ ಮುಂದಿನ ದಿನಗಳಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರ ನೇತೃತ್ವದಲ್ಲಿ ಇನ್ನೂ ಹೆಚ್ಚು ಜನಪರ ಕೆಲಸ ಕಾರ್ಯಗಳನ್ನು ನಾವೆಲ್ಲರೂ ಒಟ್ಟಿಗೆ ಸೇರಿ ಮಾಡೋಣ ಎಂದು ತಿಳಿಸಿದರು.

## "ಗುಂಪು ರಚನೆಯ ನಿರ್ವಹಣೆ ಮತ್ತು ಪರಿಣಾಮಕಾರಿ ಸಂವಹನ" ಕುರಿತು ತರಬೇತಿ ಕಾರ್ಯಕ್ರಮ

**ಶಿವಮೊಗ್ಗ** : ದಿನಾಂಕ 28.07.2021 ರಂದು ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ "ಗುಂಪು ರಚನೆಯ ನಿರ್ವಹಣೆ ಮತ್ತು ಪರಿಣಾಮಕಾರಿ ಸಂವಹನ" ವಿಷಯದ ಕುರಿತು ಆನ್‌ಲೈನ್ ಮೂಲಕ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಉದ್ಘಾಟನೆಯನ್ನು ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಮಾನ್ಯ ಅಧ್ಯಕ್ಷರು, ಸಂಯುಕ್ತ ಸಹಕಾರಿ ಇವರು ನೇರವೇರಿಸಿದರು. ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಎ.ಆರ್, ಪ್ರಸನ್ನ ಕುಮಾರ್, ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ ಇವರು ವಹಿಸಿದ್ದರು. ತರಬೇತಿಯ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಡಾ. ನಂದೀಶ್ ಹಿರೇಮಠ್, ಪ್ರೊಫೆಸರ್, ಮಾನವ ಸಂಪನ್ಮೂಲ ಮತ್ತು ಉದ್ಯಮಶೀಲತೆ, ಬೆಂಗಳೂರು, ಇವರು ಭಾಗವಹಿಸಿ ಅಗತ್ಯ ಮಾಹಿತಿ ನೀಡಿದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ಇವರು ಉಪಸ್ಥಿತರಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಇವರು ಭಾಗವಹಿಸಿದ್ದರು. 106 ಪ್ರತಿನಿಧಿಗಳು ಭಾಗವಹಿಸಿ ತರಬೇತಿ ಪ್ರಯೋಜನ ಪಡೆದುಕೊಂಡರು.

## ನೇಮಕಾತಿ ಪ್ರಕಟಣೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದಲ್ಲಿ ವಿವಿಧ ಹುದ್ದೆಗಳಿಗಾಗಿ ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಅವಧಿ 20.07.2021 ರಿಂದ 21.08.2021ರೊಳಗೆ. ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ವಿವರವಾದ ಅಧಿಸೂಚನೆ, ಅರ್ಜಿ ಶುಲ್ಕ ವಿವರ ಹಾಗೂ ಅರ್ಜಿ ನಮೂನೆಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದು, ಅರ್ಹ ಅಭ್ಯರ್ಥಿಗಳು ಅಧಿಸೂಚನೆಯನ್ನು ಗಮನಿಸಿ ಅರ್ಜಿ ಸಲ್ಲಿಸಬಹುದಾಗಿದೆ. ಈ ನೇಮಕಾತಿಯು ಸಂಯುಕ್ತ ಸಹಕಾರಿಯಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವವರಿಗೆ ಹಾಗೂ ಸೌಹಾರ್ದ ಸಹಕಾರಿಗಳಲ್ಲಿ ವ್ಯವಸ್ಥಾಪಕರ ಹುದ್ದೆ ಮೇಲ್ಪಟ್ಟ ಹುದ್ದೆಯಲ್ಲಿರುವವರಿಗೆ ಅನ್ವಯಿಸುತ್ತದೆ.

**ಸಹಿ/–**

**ವ್ಯವಸ್ಥಾಪಕ ನಿರ್ದೇಶಕರು ಮತ್ತು**

**ಸದಸ್ಯ ಕಾರ್ಯದರ್ಶಿ, ಸಿಬ್ಬಂದಿ ನೇಮಕಾತಿ ಸಮಿತಿ.**

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ

## ಕಲಬುರಗಿ ಪ್ರಾಂತದ ನೂತನ ಕಟ್ಟಡದ ಭೂಮಿ ಪೂಜೆ ಮತ್ತು ಶಂಕು ಸ್ಥಾಪನೆ ಸಮಾರಂಭ






**ಕಲಬುರಗಿ :** ದಿನಾಂಕ 30.07.2021 ರಂದು ಕಲಬುರಗಿ ಪ್ರಾಂತದ ನೂತನ ಕಟ್ಟಡದ ಗುದ್ದಲಿ ಪೂಜೆ ಮತ್ತು ಶಂಕು ಸ್ಥಾಪನೆಯನ್ನು ಮಾನ್ಯ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಬಿ.ಹೆಚ್.ಕೃಷ್ಣಾರೆಡ್ಡಿಯವರು ನೇರವೇರಿಸಿದರು. ಭೂಮಿ ಪೂಜೆಯಲ್ಲಿ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಪಾಲ್ಗೊಂಡಿದ್ದರು. ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತೀಕರ, ಶ್ರೀ ವೈ.ಟಿ ಪಾಟೀಲ, ಶ್ರೀ ಆರ್. ತಿಮ್ಮಯ್ಯ ಶೆಟ್ಟಿ, ಶ್ರೀ ಜಿ. ಶ್ರೀಧರ ಶ್ರೀ ವಿಶ್ವನಾಥ ಹಿರೇಮಠ, ಶ್ರೀ ಎ.ಆರ್ ಪ್ರಸನ್ನಕುಮಾರ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ಉಪಸ್ಥಿತರಿದ್ದರು. ಈ ಸಮಾರಂಭಕ್ಕೆ ವಾಸ್ತುಶಿಲ್ಪಿಗಳಾದ ಶ್ರೀ ಬಸವರಾಜ ಖಂಡೇರಾವ್ ಕಲಬುರಗಿ ಪ್ರಾಂತದ ಸ್ಥಳೀಯ ಸಹಕಾರಿಗಳು ಮತ್ತು ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಪದಾಧಿಕಾರಿಗಳು ಮತ್ತು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಪದಾಧಿಕಾರಿಗಳು ಮತ್ತು ಪ್ರಾಂತದ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.

### ಪತ್ರಿಕಾಗೋಷ್ಠಿ

ಭೂಮಿ ಪೂಜೆಯ ನಂತರ ಸಹಕಾರಿಗಳನ್ನು ಉದ್ದೇಶಿಸಿ ಮಾತಾನಾಡಿದ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ಪ್ರಾಂತೀಯ ನೂತನ ಕಟ್ಟಡದ ಭೂಮಿ ಪೂಜೆಗೆ ಆಗಮಿಸಿ ಯಶಸ್ವಿಗೊಳಿಸಿದ ಎಲ್ಲಾ ಸಹಕಾರಿಗಳ ಪ್ರತಿನಿಧಿಗಳಿಗೆ ಧನ್ಯವಾದಗಳನ್ನು ತಿಳಿಸಿದರು. ಪ್ರಾಂತದ ನಿರ್ದೇಶಕರ ಸಹಕಾರದಿಂದ ನಿವೇಶನ ಖರೀದಿ ಮಾಡಲಾಗಿದೆ. ಈ ಕಟ್ಟಡವು ಪ್ರಾಂತದ ಸಹಕಾರಿಗಳಿಗೆ ಅನುಕೂಲವಾಗಲಿದೆ. ಗ್ರಾಮೀಣ ಮಟ್ಟದಲ್ಲಿಯೂ ಕೂಡ ನಮ್ಮ ಸಹಕಾರಿಗಳಿಗೆ ಸೇವೆ ಲಭಿಸಲಿ ಎಂಬ ಆಶಯ ಸಂಯುಕ್ತ ಸಹಕಾರಿಯದ್ದಾಗಿದೆ. ಸಹಕಾರಿಗಳು ಸಮಾಜಮುಖಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಉತ್ತಮ ರೀತಿಯಲ್ಲಿ ಮುನ್ನಡೆಯಬೇಕೆಂಬ ಆಶೆ ನಮ್ಮದಾಗಿದೆ. ಎಂದರು. ಸಹಕಾರಿಗಳ ಅಪೇಕ್ಷೆಯಂತೆ, ಆಡಳಿತ ಮಂಡಳಿಯ ನಿರ್ಣಯದಂತೆ ಕಲಬುರಗಿ ಪ್ರಾಂತದ ನೂತನ ಕಟ್ಟಡದವು ಪ್ರಾರಂಭಿಸಲಾಗುವುದು, ಒಂದು ವಾರದಲ್ಲಿ ಟೆಂಡರ ಪ್ರಕ್ರಿಯೇ ಕರೆಯಲಾಗುತ್ತದೆ. ಇದಕ್ಕೆ ಸಹಕಾರಿಗಳು ಒಳ್ಳೆಯ ಗುತ್ತಿಗೆದಾರರನ್ನು ನೀಡಿ ಮುತುವರ್ಜಿವಹಿಸಿ ಗುಣಮಟ್ಟದ ಕಟ್ಟಡ ನಿರ್ಮಾಣವಾಗಲು ಸಹಕಾರ ನೀಡಬೇಕೆಂದು ತಿಳಿಸಿದರು. ಮಾನ್ಯ ನಿರ್ದೇಶಕರುಗಳಾದ ಶ್ರೀ ಸಂಜೀವ ಮಹಾಜನ, ಶ್ರೀ ಗುರುನಾಥ ಜ್ಯಾಂತೀಕರ, ಶ್ರೀ ವೈ.ಟಿ ಪಾಟೀಲ, ಶ್ರೀ ಆರ್. ತಿಮ್ಮಯ್ಯ ಶೆಟ್ಟಿ, ಶ್ರೀ ಜಿ. ಶ್ರೀಧರ ಶ್ರೀ ವಿಶ್ವನಾಥ ಹಿರೇಮಠ, ಶ್ರೀ ಎ.ಆರ್ ಪ್ರಸನ್ನಕುಮಾರ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಮತ್ತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ಹಾಗೂ ಪ್ರಾಂತದ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಅಭಿನಂದನಾ ಕಾರ್ಯಕ್ರಮ



**ಬೆಳಗಾವಿ :** ದಿನಾಂಕ 14 ಜುಲೈ 2021ರಂದು ಬೆಳಗಾವಿಯ ಹೋಟಲ್ ಸನ್ಮಾನ್‌ದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಾದ ಶ್ರೀ ಚಂದ್ರಕಾಂತ ಪಡಚಣ್ಣವರ ಇವರಿಗೆ ಅಭಿನಂದನಾ ಕಾರ್ಯಕ್ರಮಮವನ್ನು ಏರ್ಪಡಿಸಲಾಗಿತ್ತು. ಮಾನ್ಯರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ಶ್ರೀಯುತರಿಗೆ ಸನ್ಮಾನ ಮಾಡಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಜಿ.ಎನ್.ಪಾಟೀಲ, ಶ್ರೀ ಸಿದ್ರಾಮಪ್ಪ ಚ ಉಪ್ಪಿನ್, ಶ್ರೀಮತಿ ಸರಸ್ವತಿ ಎನ್.ರವಿ. ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ ಮಾರುತಿ ಪವಾರ, ಶ್ರೀ ಪ್ರಸನ್ನಕುಮಾರ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಮತ್ತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಮತ್ತು ಪ್ರಾಂತೀಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಠೇವಣಿದಾರರ ಹಿತರಕ್ಷಣೆ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಆರೋಗ್ಯಕರ ಬೆಳವಣಿಗೆಗಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ನಿರ್ವಹಣಾ ವಿಶೇಷ ಕಾರ್ಯಪಡೆ ಕಾರ್ಯಾರಂಭ

## (KSSFCL Task Force for Managing the Problematic Souharda Cooperatives Started Functioning)

ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ನಡೆಯುತ್ತಿರುವ ಅವ್ಯವಹಾರ, ಹಣ ದುರುಪಯೋಗ, ಅಧಿಕಾರ ದುರುಪಯೋಗ ಮತ್ತು ವಂಚನೆಗಳ ಕುರಿತು ನಿಗಾ ವಹಿಸಲು ವಿಚಕ್ಷಣ ದಳ/ ಜಾಗೃತಿದಳ/ಮೇಲ್ವಿಚಾರಣಾ ಸಮಿತಿ (Task Force) ರಚಿಸಲಾಗಿದೆ. ಈ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳಿಗೆ ಒಂದು ತಾಂತ್ರಿಕ ಅಂತ್ಯ ಕಲ್ಪಿಸಲು ಹಾಗೂ ಮುಂಬರುವ ದಿನಗಳಲ್ಲಿ ಈ ರೀತಿಯ ಸಮಸ್ಯಾತ್ಮಕ ಸಹಕಾರಿ ಸಂಸ್ಥೆಗಳು ಹುಟ್ಟಿಕೊಳ್ಳದ ಹಾಗೆ ನೋಡಿಕೊಳ್ಳುವಂತೆ ಈ ವಿಚಕ್ಷಣ ದಳ/ ಜಾಗೃತಿದಳ/ಮೇಲ್ವಿಚಾರಣಾ ಸಮಿತಿ ಕಾರ್ಯನಿರ್ವಹಿಸಲಿದೆ. ಈ ವಿಚಕ್ಷಣಾ ದಳದಲ್ಲಿ ಸನ್ನದು ಲೆಕ್ಕಪರಿಶೋಧಕರು, ವಕೀಲರು, ಪೊಲೀಸ್ ನಿವೃತ್ತ ಅಧಿಕಾರಿ, ಸಹಕಾರ ಇಲಾಖೆಯ ಅಧಿಕಾರಿ/ ನಿವೃತ್ತ ಅಧಿಕಾರಿಗಳು ಇರುತ್ತಾರೆ.

**ರಚನೆ–ಕಾರ್ಯವ್ಯಾಪ್ತಿ–ಕಛೇರಿ :**

ರಾಜ್ಯದಲ್ಲಿ ಎರಡು ವಿಶೇಷ ಕಾರ್ಯ ಪಡೆ(ಟಾಸ್ಕ್ ಫೋರ್ಸ್) ಇರತಕ್ಕದ್ದು. ಪ್ರತಿಯೊಂದು ವಿಶೇಷ ಕಾರ್ಯ ಪಡೆ(ಟಾಸ್ಕ್ ಫೋರ್ಸ್)ಗೂ ಸಹಾಯಕ ಪ್ರಧಾನ ವ್ಯವಸ್ಥಾಪಕ ಅಥವಾ ಮೇಲಿನ ಹುದ್ದೆಯ ಓರ್ವ ಅಧಿಕಾರಿ ಮುಖ್ಯಸ್ಥರಾಗಿರುತ್ತಾರೆ. ಒಂದು ವಿಶೇಷ ಕಾರ್ಯ ಪಡೆ(ಟಾಸ್ಕ್ ಫೋರ್ಸ್) ಕಛೇರಿ ಬೆಂಗಳೂರಿನಲ್ಲಿ ಇರುತ್ತದೆ. ಬೆಂಗಳೂರು ಮತ್ತು ಮೈಸೂರು ಪ್ರಾಂತಗಳು ಇದರ ವ್ಯಾಪ್ತಿಯಾಗಿರುತ್ತದೆ.

ಇನ್ನೊಂದು ವಿಶೇಷ ಕಾರ್ಯ ಪಡೆ (ಟಾಸ್ಕ್ ಫೋರ್ಸ್) ಕಛೇರಿ ಬೆಳಗಾವಿಯಲ್ಲಿ ಇರುತ್ತದೆ. ಬೆಳಗಾವಿ ಮತ್ತು ಕಲಬುರಗಿ ಪ್ರಾಂತಗಳು ಇದರ ವ್ಯಾಪ್ತಿಯಾಗಿರುತ್ತದೆ.

**ಪ್ರಕಾರ್ಯ–ಕರ್ತವ್ಯ–ಅಧಿಕಾರಗಳು :**

ಠೇವಣಿದಾರರಿಗೆ ವಂಚನೆ ಮಾಡಿರುವ ಸಹಕಾರಿಗಳ ಸಂಬಂಧದಲ್ಲಿ, ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸುವುದು, ನ್ಯಾಯಾಲಯದಲ್ಲಿ ದಾವಾ/ಅಧಿಭಾರ ಅರ್ಜಿ ದಾಖಲಿಸುವುದು ಸೇರಿದಂತೆ ಅಗತ್ಯ ತುರ್ತು ಕ್ರಮಗಳನ್ನು ತೆಗೆದುಕೊಳ್ಳುವುದು.

ಪರಿವೀಕ್ಷಣೆ/ವಿಚಾರಣೆ ಸಂದರ್ಭದಲ್ಲಿ ಗಂಭೀರ ಹಣಕಾಸು ಅಕ್ರಮಗಳು/ ಅವ್ಯವಹಾರ/ನ್ಯೂನತೆಗಳು ಇರುವ ಸಹಕಾರಿಗಳಿಗೆ ಸಂಬಂಧಿಸಿ ಕಾರ್ಯ ಯೋಜನೆ ರೂಪಿಸಿ ಮಂಡಲಿಯ ಅನುಮೋದನೆ ಪಡೆದು ಜಾರಿ ಮಾಡುವುದು.

**ತಜ್ಞರ ಸೇವೆ :**

ಪ್ರತಿಯೊಂದು ಜಿಲ್ಲೆಗೂ ಸ್ಥಳೀಯವಾಗಿ ಲಭ್ಯವಿರುವ ಸಂಯುಕ್ತ ಸಹಕಾರಿ ಮಂಡಲಿಯಿಂದ ಅನುಮೋದಿತವಾದ ನಿವೃತ್ತ ಸಹಕಾರ ಇಲಾಖಾಧಿಕಾರಿಗಳು, ನಿವೃತ್ತ ಪೋಲೀಸ್ ಅಧಿಕಾರಿಗಳು, ನಿವೃತ್ತ ಲೆಕ್ಕಪರಿಶೋಧನಾ ಅಧಿಕಾರಿಗಳು, ಸನ್ನದು ಲೆಕ್ಕಪರಿಶೋಧಕರು, ವಕೀಲರು ಇವರುಗಳ ಪ್ಯಾನೆಲ್ ಇರುತ್ತದೆ. ಅಗತ್ಯಕ್ಕೆ ತಕ್ಕಂತೆ ಇವರುಗಳ ಸೇವೆಯನ್ನು ವಿಶೇಷ ಕಾರ್ಯ ಪಡೆ(ಟಾಸ್ಕ್ ಫೋರ್ಸ್) ಬಳಸಿಕೊಳ್ಳುತ್ತದೆ. ಪ್ರಸಕ್ತ ಬೆಂಗಳೂರು ಪ್ರಾಂತ್ಯದಲ್ಲಿ 9, ಮೈಸೂರು ಪ್ರಾಂತ್ಯದಲ್ಲಿ 3, ಬೆಳಗಾವಿ ಪ್ರಾಂತ್ಯದಲ್ಲಿ 7 ಹಾಗೂ ಕಲಬುರಗಿ ಪ್ರಾಂತ್ಯದಲ್ಲಿ 3 ಸೌಹಾರ್ದ ಸಹಕಾರಿಗಳು ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳೆಂದು ಗುರುತಿಸಲಾಗಿದೆ.

**ವಿಶೇಷ ಕಾರ್ಯಪಡೆಯ ಅಧಿಕಾರಿಗಳಿಂದ ಅಧಿಕಾರ ಸ್ವೀಕಾರ :**





ಬೆಂಗಳೂರು ಹಾಗೂ ಮೈಸೂರು ಪ್ರಾಂತೀಯ ವ್ಯಾಪ್ತಿಗಳ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಸಮಸ್ಯಾತ್ಮ ಸೌಹಾರ್ದ ಸಹಕಾರಿಗಳ ವಿಶೇಷ ಕಾರ್ಯಪಡೆಯಯ ಅಧಿಕಾರಿಯಾಗಿ ಸಂಯುಕ್ತ ಸಹಕಾರಿಯ ಹಿರಿಯ ಉಪಪ್ರಧಾನ ವ್ಯವಸ್ಥಾಪಕ **ಶ್ರೀ ನಾರಾಯಣ ಹೆಗಡೆ ಮೊ : 8884466704 ಇವರು** ಅಧಿಕಾರ ವಹಿಸಿಕೊಂಡಿರುತ್ತಾರೆ.

ಬೆಳಗಾವಿ ಹಾಗೂ ಕಲಬುರಗಿ ವ್ಯಾಪ್ತಿಯ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ವಿಶೇಷ ಕಾರ್ಯಪಡೆಯ ಅಧಿಕಾರಿಯಾಗಿ ಬೆಳಗಾವಿ ಉಪಪ್ರಧಾನ ವ್ಯವಸ್ಥಾಪಕ **ಶ್ರೀ ಶ್ರೀಕಾಂತ ಬರುವೆ ಮೊ : 8884466706 ಇವರು** ಅಧಿಕಾರ ವಹಿಸಿಕೊಂಡಿರುತ್ತಾರೆ

ದಿನಾಂಕ 28–7–2021 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಈ ವಿಶೇಷ ಕಾರ್ಯಪಡೆಯ ಪ್ರಥಮ ಸಭೆ ನಡೆದು ಈ ಪಡೆಯ ಕ್ರೀಯಾಯೋಜನೆಯನ್ನು ಸಿದ್ಧಪಡಿಸಲಾಗಿದೆ. ಈ ಸಭೆಯಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ. ಜಿ.ಪಾಟೀಲ್ ಹಾಗೂ ಕೇಂದ್ರ ಕಛೇರಿಯ ಉಪಪ್ರಧಾನ ವ್ಯವಸ್ಥಾಪಕ ಶ್ರೀ ರಘುನಂದನ್ ಹಾಗೂ ಕಾನೂನು ವ್ಯವಸ್ಥಾಪಕರಾದ ಶ್ರೀ ಮಹಾಂತಪ್ಪ ರವರು ಉಪಸ್ಥಿತರಿದ್ದು ಈ ವಿಶೇಷ ಕಾರ್ಯಪಡೆಗೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಆಶಿಸಿದರು.

## ಸಂಯುಕ್ತ ಸಹಕಾರಿಯ ಅಧಿಕಾರಿಗಳ ವರ್ಗಾವಣೆಯ ವಿವರ

| ಕ್ರ.ಸಂ | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯ ಹೆಸರು ಮತ್ತು ಸ್ಥಳ | ಬದಲಾವಣೆಯಾದ ಕಾರ್ಯ ಮತ್ತು ಸ್ಥಳ |
|---|---|---|
| 1 | ಶ್ರೀ ಸಂಜಯ ಕೋರಟಕರ್, ಹಿರಿಯ ವ್ಯವಸ್ಥಾಪಕರು, ಬೆಂಗಳೂರು ಪ್ರಾಂತೀಯ ಕಛೇರಿ | ಪ್ರಾಂತೀಯ ವ್ಯವಸ್ಥಾಪಕರು (ಪ್ರಭಾರ) ಬೆಂಗಳೂರು ಪ್ರಾಂತೀಯ ಕಛೇರಿ |
| 2 | ಶ್ರೀ ಬಸವರಾಜ್ ಹೊಂಗಲ್, ವ್ಯವಸ್ಥಾಪಕರು, ಬೈಲಹೊಂಗಳ, ಸವದತ್ತಿ, ಖಾನಾಪುರ, ರಾಮದುರ್ಗ, ಕಿತ್ತೂರು ಹಿರೇಬಾಗೆವಾಡಿ – ಜಿಲ್ಲಾ ಸಂಯೋಜಕ | ಪ್ರಾಂತೀಯ ವ್ಯವಸ್ಥಾಪಕರು (ಪ್ರಭಾರ) ಬೆಳಗಾವಿ ಪ್ರಾಂತೀಯ ಕಛೇರಿ |
| 3 | ಶ್ರೀ ಗಂಗಾರಾಂ ಸಗ್ಗು ಕೋಳಪಾಟೆ, ವ್ಯವಸ್ಥಾಪಕರು, ಉತ್ತರ ಕನ್ನಡ ಜಿಲ್ಲೆ – ಜಿಲ್ಲಾ ಸಂಯೋಜಕ | ಜಿಲ್ಲಾ ಸಂಯೋಜಕ – ಬೈಲಹೊಂಗಳ, ಸವದತ್ತಿ, ಖಾನಾಪುರ, ರಾಮದುರ್ಗ, ಕಿತ್ತೂರು ಹಿರೇಬಾಗೆವಾಡಿ. |
| 4 | ಶ್ರೀ ಸಂತೋಷ ಕುಮಾರ್ ಎಂ.ಜೆ ಜಿಲ್ಲಾ ಸಂಯೋಜಕ, ಹಾಸನ & ಚಿಕ್ಕಮಂಗಳೂರು | ಜಿಲ್ಲಾ ಸಂಯೋಜಕ, ಉತ್ತರಕನ್ನಡ ಜಿಲ್ಲೆ |
| 5 | ಶ್ರೀ ಚಂದ್ರಶೇಖರಯ್ಯ ಎಂ ಜಿಲ್ಲಾ ಸಂಯೋಜಕ, ಮಂಡ್ಯ & ಚಾಮರಾಜನಗರ | ಜಿಲ್ಲಾ ಸಂಯೋಜಕ – ಮಂಡ್ಯ, ಚಾಮರಾಜನಗರ, ಹಾಸನ & ಚಿಕ್ಕಮಂಗಳೂರು |

## ಠೇವಣಿದಾರರಿಗೆ ಸಕಾಲದಲ್ಲಿ ಮರುಪಾವತಿಸದ/ವಂಚನೆ ಮಾಡಿದ ಮೋಸ ಮಾಡಿದ ಸೌಹಾರ್ದ ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಆಸ್ತಿ ಜಪ್ತಿಯ ವಿವರ

ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ಬೆಳಗಾವಿ ಕಂದಾಯ ವಿಭಾಗಕ್ಕೆ ಸಂಬಂಧಿಸಿದ ಶ್ರೀ ಭೀಮಾಂಭಿಕಾ ಮಹಿಳಾ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಹಾಗೂ ಶ್ರೀ ಬಸವೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಈ ಸಹಕಾರಿಗಳು ಕಾನೂನು ಬಾಹಿರವಾಗಿ ಠೇವಣಿಗಳನ್ನು ಅಥವಾ ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸುವ ಮೋಸದ ವ್ಯವಹಾರಗಳಲ್ಲಿ ತೊಡಗಿರುವುದು ಹಾಗೂ ತರುವಾಯ ಅವಧಿ ಮುಗಿದ ಮೇಲೆ ಅಥವಾ ಠೇವಣಿದಾರರು ಅಥವಾ ಫಿರ್ಯಾದುದಾರರು ಸಲ್ಲಿಸಿದ ಬೇಡಿಕೆ ಮೇಲಾಗಲಿ ಆಶ್ವಾಸನೆ ನೀಡಿದ ಬಡ್ಡಿ ಹಾಗೂ ಇತರೆ ಖಾತರಿ ಪ್ರಯೋಜನಗಳನ್ನು ನೀಡಲು ವಿಫಲವಾಗಿರುವುದರಿಂದ ಹಾಗೂ ಆಶ್ವಾಸನೆ ನೀಡಿದ ಸೇವೆಗಳನ್ನು ಒದಗಿಸಲು ವಿಫಲವಾಗಿರುವುದನ್ನು ಸಂಯುಕ್ತ ಸಹಕಾರಿಯು ಹಾಗೂ ಸರ್ಕಾರವೂ ಗಂಭೀರವಾಗಿ ಪರಿಗಣಿಸಿರುತ್ತದೆ.

ಸದರಿ ಸಹಕಾರಿಗಳು ಸದಸ್ಯ/ಜನರಿಂದ ಠೇವಣಿಯನ್ನು ಸಂಗ್ರಹಿಸಿ ಸದರಿ ಹಣದಿಂದ ತಮ್ಮ ವೈಯಕ್ತಿಕವಾಗಿ ಜಮೀನು, ಚರ ಹಾಗೂ ಸ್ಥಿರಾಸ್ತಿಗಳನ್ನು ನಗದು ಹಾಗೂ ಇತರ ವಸ್ತುಗಳನ್ನು ಖರೀದಿಸಿರುವುದು ಹಾಗೂ ಈ ಮೂಲಕ ಠೇವಣಿ ಹಣವನ್ನು ಪಡೆದಿರುವ ಉದ್ದೇಶಿತ ಉದ್ದೇಶಗಳಿಗೆ ಬಳಸದೆ ಬೇರೆ ಕಡೆ ವರ್ಗಾಹಿಸಿರುವುದು ಸೌಹಾರ್ದ ಸಹಕಾರಿ ಅಧಿನಿಯಮ/ನಿಯಮ ಹಾಗೂ ಸಂಯುಕ್ತ ಸಹಕಾರಿಯ ಸುತ್ತೋಲೆಗಳನ್ನು ಉಲ್ಲಂಘನೆಯಾಗಿರುವುದರಿಂದ ಹಾಗೂ ಮುಗ್ದ ಸದಸ್ಯ/ಠೇವಣಿದಾರರ ಹಿತಾಸಕ್ತಿ ಕಾಪಾಡಲು "ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಅಧಿನಿಯಮ–2004 (2005ರ ಕರ್ನಾಟಕ ಅಧಿನಿಯಮ–30) ರ ಕಲಂ 3(2)ರನ್ವಯ ಸಕ್ಷಮ ಪ್ರಾಧಿಕಾರವು ನೇಮಕವಾಗಿದ್ದು ಸದರಿ ಸಹಕಾರಿಗಳಿಗೆ ಸಂಬಂಧಿಸಿದ ಪ್ರವರ್ತಕರ, ಪಾಲುದಾರರ, ನಿರ್ದೇಶಕರ, ವ್ಯವಸ್ಥಾಪಕರ/ಸದಸ್ಯರ ಹಾಗೂ ಸದರಿ ಸಹಕಾರಿಗಳ ಠೇವಣಿಗಳಿಂದ ತನ್ನ ಹೆಸರಿನಲ್ಲಾಗಲಿ ಅಥವಾ ಯಾರೇ ಇತರೆ ವ್ಯಕ್ತಿಗಳ ಹೆಸರಿನಲ್ಲಿ ಖರೀದಿಸಿದ ಎಲ್ಲ ಸ್ಥಿರ ಸ್ವತ್ತುಗಳನ್ನು ಕಂದಾಯ ಇಲಾಖೆಯಡಿ ನೇಮಕವಾದ ಸಕ್ಷಮ ಪ್ರಾಧಿಕಾರವು ಜಪ್ತಿ ಮಾಡಿಕೊಳ್ಳುವ ಅವಕಾಶವಿರುತ್ತದೆ.

ಈ ಹಿನ್ನಲೆಯಲ್ಲಿ ಶ್ರೀ ಭೀಮಾಂಭಿಕಾ ಮಹಿಳಾ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರಾದ ಶ್ರೀಮತಿ ಪ್ರೇಮ ಆನಂದ ಅಪ್ಪಗೋಳರವರಿಗೆ ಸಂಬಂಧಿಸಿದ 04 ಮತ್ತು ಕಾಶವ್ವಾ ರಾಮಪ್ಪ ಉಳ್ಳಾಗಡ್ಡಿರವರ 01 ಸ್ಥಿರಾಸ್ತಿಗಳನ್ನು ಸಕ್ಷಮ ಪ್ರಾಧಿಕಾರವು ಜಪ್ತಿ ಮಾಡಲಾಗಿರುತ್ತದೆ ಹಾಗೂ ಶ್ರೀ ಬಸವೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರಿಗೆ ಸಂಬಂಧಿಸಿದ 23 ಸ್ಥಿರಾಸ್ತಿಗಳನ್ನು "ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಅಧಿನಿಯಮ–2004 ರಡಿ ನೇಮಕವಾದ ಸಕ್ಷಮ ಪ್ರಾಧಿಕಾರವಾದ ಉಪವಿಭಾಗಧಿಕಾರಿಗಳು ಚಿಕ್ಕೋಡಿರವರು ಜಪ್ತಿ ಮಾಡಿರುತ್ತಾರೆ.

ಆದ್ದರಿಂದ ಸೌಹಾರ್ದ ಸಹಕಾರಿಗಳು ತಾವು ಸದಸ್ಯರಿಂದ ಸ್ವೀಕರಿಸಿದ ಠೇವಣಿಗಳನ್ನು ಕಾಯ್ದೆ/ನಿಯಮ/ಸುತ್ತೋಲೆಯನುಸಾರ ಹೂಡಿಕೆ ಮಾಡಿ ಸದಸ್ಯರ ವಿಶ್ವಾಸವನ್ನು ಹೆಚ್ಚಿಸುವಲ್ಲಿ ಅಗತ್ಯ ಕ್ರಮವಿಡುವ ಅವಶ್ಯಕತೆ ಇರುತ್ತದೆ. ಠೇವಣಿದಾರರಿಗೆ ಸಕಾಲದಲ್ಲಿ ಠೇವಣಿ ಹಣ ಮರುಪಾವತಿಸದ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಯ ಸದಸ್ಯ ಮೇಲೆ ಸಂಯುಕ್ತ ಸಹಕಾರಿಯು ಕಾಯ್ದೆಯನುಸಾರ ಕ್ರಮವಿಡಲಾಗುವುದು.

# ಸಂಯುಕ್ತ ಸಹಕಾರಿಯ ಆನ್ ಲೈನ್ ತರಬೇತಿ ಕಾರ್ಯಕ್ರಮಗಳು

## “ದಾವಾ ಮತ್ತು ಅಮಲ್ದಾರಿ ಪ್ರಕ್ರಿಯೆ ವಿಧಾನ” ಕುರಿತು ತರಬೇತಿ ಕಾರ್ಯಕ್ರಮ

**ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ** : ದಿನಾಂಕ 30.07.2021 ರಂದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ “ದಾವಾ ಮತ್ತು ಅಮಲ್ದಾರಿ ಪ್ರಕ್ರಿಯೆ ವಿಧಾನ” ವಿಷಯದ ಕುರಿತು ಆನ್‌ಲೈನ್ ತರಬೇತಿಯನ್ನು ಆಯೋಜಿಸಲಾಗಿತ್ತು. ಸದರಿ ತರಬೇತಿಯ ಉಪನ್ಯಾಸಕರಾಗಿ ಶ್ರೀ ವೈ.ಸಿ. ಸುರೇಶ್, ವಕೀಲರು, ಬೆಂಗಳೂರು, ಇವರು ಭಾಗವಹಿಸಿ ಅಗತ್ಯ ಮಾಹಿತಿ ನೀಡಿದರು. ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಶ್ರೀ ಸಂಜಯ ಕೋರಟಕರ, ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರು, ಇವರು ನೆರವೇರಿಸಿದರು. ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಂ ಮತ್ತು ಅನಿಲ್ ಕುಮಾರ್ ಎಂ. ಇವರು ಭಾಗವಹಿಸಿದ್ದರು. 99 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.

## ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮ ಮತ್ತು ಸಮಾಲೋಚನಾ ಸಭೆ

**ಯಾದಗಿರಿ** : ದಿನಾಂಕ 29.07.2021ರಂದು ಯಾದಗಿರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರುಗಳಿಗೆ ಆಡಳಿತ ಪರಿಣಿತಿ ತರಬೇತಿ ಮತ್ತು ಸಮಾಲೋಚನಾ ಸಭೆಯನ್ನು ಯಾದಗಿರಿ ಜಿಲ್ಲೆಯ ಶಹಪೂರ ತಾಲೂಕಿನ ವೈಷ್ಣವಿ ಹೋಟೆಲ್‌ನ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಬೆಳಿಗ್ಗೆ 10.30 ಆಡಳಿತ ಪರಿಣೀತಿ ತರಬೇತಿಯು ಆಯೋಜಿಸಲಾಗಿದ್ದು, ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀ ವೈ.ಟಿ ಪಾಟೀಲರವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಡಾ॥ ಶಶಿಶೇಖರರೆಡ್ಡಿ ಸಹಪ್ರಾಧ್ಯಾಪಕರು ಸರಕಾರಿ ಮಹಿಳಾ ಮಹಾವಿದ್ಯಾಲಯ ಕಲಬುರಗಿ ಇವರು ಆಡಳಿತ ಮಂಡಳಿ ಸದಸ್ಯರ ಹಕ್ಕು ಮತ್ತು ಜವಾಬ್ದಾರಿಗಳ ಕುರಿತು ಉಪನ್ಯಾಸ ನೀಡಿದರು.

ಮಧ್ಯಾಹ್ನದ ಅವಧಿ 2.30ಕ್ಕೆ ಸಮಾಲೋಚನೆ ಸಭೆಯನ್ನು ಆಯೋಜಿಸಲಾಗಿತ್ತು. ಸಮಾಲೋಚನಾ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ನೆರವೆರಿಸಿ ಮಾತನಾಡಿ ದೇಶದಲ್ಲಿ 30 ಕೋಟಿಗಿಂತ ಹೆಚ್ಚಿನ ಸದಸ್ಯರು ಹೊಂದಿರುವ ಸಹಕಾರ ಕ್ಷೇತ್ರವು, ಕೇಂದ್ರದಲ್ಲಿ ಕೃಷಿ ಇಲಾಖೆ ಇತ್ತು. ದೇಶದ ಹಲವಾರು ಸಹಕಾರಿಗಳ ಬೇಡಿಕೆಯಾಗಿದ್ದ ಪ್ರತ್ಯೇಕ ಇಲಾಖೆ ಕೇಂದ್ರ ಸರಕಾರ ನೀಡಿದ್ದು ಹರ್ಷ ಉಂಟು ಮಾಡಿದೆ. ಅದಕ್ಕಾಗಿ ಪ್ರಧಾನಿ ಶ್ರೀ ನರೇಂದ್ರ ಮೋದಿ ಹಾಗೂ ಗೃಹ ಮತ್ತು ಸಹಕಾರ ಸಚಿವರಾದ ಶ್ರೀ ಅಮಿತ್ ಶಾ ಅವರಿಗೆ ಧನ್ಯವಾದಗಳನ್ನು ಸಲ್ಲಿಸಿದರು. ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಪ್ರಾಸ್ತಾವಿಕ ನುಡಿಯಲ್ಲಿ ಸಂಯುಕ್ತ ಸಹಕಾರಿಯು ತರಬೇತಿ ಹಾಗೂ ನಿಯಂತ್ರಣದಲ್ಲಿ ರಾಜ್ಯದಲ್ಲಿಯೇ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ತರಬೇತಿಯ ಸದುಪಯೋಗ ಪಡೆದುಕೊಂಡು ಗುಣಮಟ್ಟದ ಸಹಕಾರಿ ಕಟ್ಟುವಂತೆ ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಶ್ರೀ ಜಿ. ಶ್ರೀಧರ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಉಪನಿರ್ದೇಶಕರಾದ ಶ್ರೀ ಗೋವಿಂದಪ್ಪ ಸೇಡಂ ರವರು ಉಪಸ್ಥಿತರಿದ್ದರು. ಶ್ರೀ ವೀರಶೆಟ್ಟಿ.ಕೆ ಜಿಲ್ಲಾ ಸಂಯೋಜಕರು ಸ್ವಾಗತವನ್ನು ವೆಂಕಟೇಶ ರಾಠೋಡರವರು ಜಿಲ್ಲಾ ಸಂಯೋಜಕರು ವಂದನಾರ್ಪಣೆಯನ್ನು ಮಾಡಿದರು. ಕಾರ್ಯಕ್ರಮದಲ್ಲಿ 47 ಸಹಕಾರಿಗಳಿಂದ 75 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು

## ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ಕೋವಿಡ್-19 ನ ವಿಷಮ ಪರಿಸ್ಥಿತಿಯಲ್ಲಿ ಸಹಕಾರಿಗಳು ಮಿತವ್ಯಯದಲ್ಲಿ ಕಾರ್ಯನಿರ್ವಹಿಸುವ ವಿಧಾನಗಳು ವಿಷಯದ ಕುರಿತು ತರಬೇತಿ ಕಾರ್ಯಕ್ರಮ

**ಬೆಳಗಾವಿ** : ದಿನಾಂಕ 01 ಜುಲೈ 2021 ರಂದು ಬೆಳಗಾವಿ ಜಿಲ್ಲೆಯ ಬೆಳಗಾವಿ, ಬೈಲಹೊಂಗಲ, ಸವದತ್ತಿ, ರಾಮದುರ್ಗ, ಖಾನಾಪೂರ, ಚನ್ನಮ್ಮನ ಕಿತ್ತೂರು ಹಾಗೂ ಯರಗಟ್ಟಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸದಸ್ಯರಿಗೆ ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ಕೋವಿಡ್–19 ನ ವಿಷಮ ಪರಿಸ್ಥಿತಿಯಲ್ಲಿ ಸಹಕಾರಿಗಳು ಮಿತವ್ಯಯದಲ್ಲಿ ಕಾರ್ಯನಿರ್ವಹಿಸುವ ವಿಧಾನಗಳು ವಿಷಯದ ಕುರಿತು ಆನ್‌ಲೈನ್ ಮುಖಾಂತರ “ಗೋ ಟು ಮೀಟಿಂಗ್ ಆ್ಯಪ್” ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ತರಬೇತಿಯಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ವ್ಯವಸ್ಥಾಪಕರು/ಜಿಲ್ಲಾ ಸಂಯೋಜಕರಾದ ಶ್ರೀ ಬಸವರಾಜ ಹೊಂಗಲ ಮತ್ತು ಕಿರಿಯ ವ್ಯವಸ್ಥಾಪಕರಾದ ಶ್ರೀ ಸಂತೋಷ ಬಸಣ್ಣವರ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 150 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ಕೋವಿಡ್–19 ನ ವಿಷಮ ಪರಿಸ್ಥಿತಿಯಲ್ಲಿ ಸಹಕಾರಿಗಳು ಮಿತವ್ಯಯದಲ್ಲಿ ಕಾರ್ಯನಿರ್ವಹಿಸುವ ವಿಧಾನಗಳು ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಸ್.ಎ.ಸಿದ್ಧಾಂತಿ, ಮಾನ್ಯ ನಿರ್ದೇಶಕರು (ನಿವೃತ್ತ) ಆರ್.ಐ.ಸಿ.ಎಂ. ಬೆಂಗಳೂರು ಇವರು ಉಪನ್ಯಾಸ ನೀಡಿದರು.

ದಿನಾಂಕ 02 ಜುಲೈ 2021 ರಂದು ಬೆಳಗಾವಿ ಜಿಲ್ಲೆಯ ಗೋಕಾಕ ಮತ್ತು ಮೂಡಲಗಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸದಸ್ಯರಿಗೆ ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ಕೋವಿಡ್–19 ನ ವಿಷಮ ಪರಿಸ್ಥಿತಿಯಲ್ಲಿ ಸಹಕಾರಿಗಳು ಮಿತವ್ಯಯದಲ್ಲಿ ಕಾರ್ಯನಿರ್ವಹಿಸುವ ವಿಧಾನಗಳು ವಿಷಯದ ಕುರಿತು ಆನ್‌ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ ಮಾರುತಿ ಪವಾರ ಇವರು ವಹಿಸಿದ್ದರು. ತರಬೇತಿಯಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಸುಜಯ ಡಿ ಬೆಳವಿ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 158 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ಕೋವಿಡ್–19 ನ ವಿಷಮ ಪರಿಸ್ಥಿತಿಯಲ್ಲಿ ಸಹಕಾರಿಗಳು ಮಿತವ್ಯಯದಲ್ಲಿ ಕಾರ್ಯನಿರ್ವಹಿಸುವ ವಿಧಾನಗಳು ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಸ್. ಎ.ಸಿದ್ಧಾಂತಿ, ಮಾನ್ಯ ನಿರ್ದೇಶಕರು (ನಿವೃತ್ತ) ಆರ್.ಐ.ಸಿ.ಎಂ. ಬೆಂಗಳೂರು ಇವರು ಉಪನ್ಯಾಸ ನೀಡಿದರು.

ದಿನಾಂಕ 02 ಜುಲೈ 2021 ರಂದು ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ, ರಾಯಬಾಗ, ನಿಪ್ಪಾಣಿ ಮತ್ತು ಕಾಗವಾಡ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸದಸ್ಯರಿಗೆ ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ಕೋವಿಡ್–19 ನ ವಿಷಮ ಪರಿಸ್ಥಿತಿಯಲ್ಲಿ ಸಹಕಾರಿಗಳು ಮಿತವ್ಯಯದಲ್ಲಿ ಕಾರ್ಯನಿರ್ವಹಿಸುವ ವಿಧಾನಗಳು ವಿಷಯದ ಕುರಿತು ಆನ್‌ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು. ತರಬೇತಿಯಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಜವಾಹರ ಮುಗ್ಗನವರ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 258 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ಕೋವಿಡ್–19 ನ ವಿಷಮ ಪರಿಸ್ಥಿತಿಯಲ್ಲಿ ಸಹಕಾರಿಗಳು ಮಿತವ್ಯಯದಲ್ಲಿ ಕಾರ್ಯನಿರ್ವಹಿಸುವ ವಿಧಾನಗಳು ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಸ್. ಎ.ಸಿದ್ಧಾಂತಿ, ಮಾನ್ಯ ನಿರ್ದೇಶಕರು (ನಿವೃತ್ತ)ಆರ್.ಐ.ಸಿ.ಎಂ. ಬೆಂಗಳೂರು ಇವರು ಉಪನ್ಯಾಸ ನೀಡಿದರು.

## ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ವಿವಿಧ ತೆರಿಗೆ ಕಾಯ್ದೆಗಳು, ಆದಾಯ ತೆರಿಗೆ ಹಾಗೂ ಜಿಎಸ್‌ಟಿ ಕುರಿತು ತರಬೇತಿ ಕಾರ್ಯಕ್ರಮ

**ಮೈಸೂರು ಮತ್ತು ಕೊಡಗು :** ಮೈಸೂರು ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ವಿವಿಧ ತೆರಿಗೆ ಕಾಯ್ದೆಗಳು, ಆದಾಯ ತೆರಿಗೆ ಹಾಗೂ ಜಿಎಸ್‌ಟಿ ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ 30.07.2021 ಶುಕ್ರವಾರ ಬೆಳಿಗ್ಗೆ 11:00 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ನಂತರ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಶ್ರೀ ಬಿ.ವಿ. ರವೀಂದ್ರನಾಥ್, ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರು ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ವಿವಿಧ ತೆರಿಗೆ ಕಾಯ್ದೆಗಳು, ಆದಾಯ ತೆರಿಗೆ ಹಾಗೂ ಜಿಎಸ್‌ಟಿ ಕುರಿತು ಉಪನ್ಯಾಸ ನೀಡಿದರು. ಮೈಸೂರು ಮತ್ತು ಕೊಡಗು ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್.ಎಸ್ ರವರು ಉಪಸ್ಥಿತರಿದ್ದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 42 ಸೌಹಾರ್ದ ಸಹಕಾರಿಗಳಿಂದ 46 ಪ್ರತಿನಿಧಿಗಳು ಭಾಗವಹಿಸಿದ್ದರು.

## ಪತ್ರಿಕಾಗೋಷ್ಠಿ




**ಚಿಕ್ಕಬಳ್ಳಾಪುರ :** ದಿನಾಂಕ 17.07.2021ರಂದು ದೇಶದಲ್ಲಿ ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಉತ್ತೇಜಿಸುವ ಮೂಲಕ ಸಹಕಾರಿ ಆಂದೋಲನಕ್ಕೆ ಮತ್ತಷ್ಟು ಬಲ ತುಂಬುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು "ಸಹಕಾರಿ ಸಚಿವಾಲಯ" ಎಂಬ ನೂತನ ಸಚಿವಾಲಯವನ್ನು ರಚನೆ ಮಾಡಿರುವ ಕುರಿತು ಚಿಕ್ಕಬಳ್ಳಾಪುರ ಜಿಲ್ಲಾ ಪತ್ರಕರ್ತರ ಭವನ, ಚಿಕ್ಕಬಳ್ಳಾಪುರ ಇಲ್ಲಿ ಉದ್ದೇಶಿತ ಚಿಕ್ಕಬಳ್ಳಾಪುರ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಮುಖ್ಯಪ್ರವರ್ತಕರಾದ ಶ್ರೀಮತಿ ಟಿ.ಎನ್. ಶೈಲಜಾ ಇವರು ಪತ್ರಿಕಾಗೋಷ್ಠಿಯನ್ನು ನಡೆಸುವ ಮೂಲಕ ಕೇಂದ್ರ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದರು. ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಭಾರತಿ ಹಾಗೂ ಓರಿಯಂಟಲ್ ಕಿಸಾನ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಆರ್. ಅಮರ್, ಸಮೃದ್ಧಿ ಮಹಿಳಾ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಡಾ. ಗಂಗಲಕ್ಷ್ಮಮ್ಮ, ಜಿಲ್ಲಾ ಸಂಯೋಜಕರಾದ ಉಮೇಶ್ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಉಪಸ್ಥಿತರಿದ್ದರು.

## "ಆದಾಯ ತೆರಿಗೆ ಮತ್ತು ಜಿ.ಎಸ್.ಟಿ" ತರಬೇತಿ ಕಾರ್ಯಕ್ರಮ

**ತುಮಕೂರು, ಕೋಲಾರ ಹಾಗೂ ಚಿಕ್ಕಬಳ್ಳಾಪುರ :** ದಿನಾಂಕ 02.07.2021 ರಂದು ತುಮಕೂರು, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಆನ್‌ಲೈನ್ ಮೂಲಕ "ಆದಾಯ ತೆರಿಗೆ ಮತ್ತು ಜಿ.ಎಸ್.ಟಿ" ವಿಷಯದ ಕುರಿತು ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಕಾನೂನು ಅಧಿಕಾರಿಗಳಾದ ಶ್ರೀ ಸಂಜಯ ಕೋರಟಕರ ಇವರು ನೆರವೇರಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಬಿ.ವಿ. ರವೀಂದ್ರನಾಥ್, ಸನ್ನದು ಲೆಕ್ಕಪರಿಶೋಧಕರು, ಸಾಗರ. ಇವರು ಭಾಗವಹಿಸಿ ಅಗತ್ಯ ಮಾಹಿತಿ ನೀಡಿದರು. ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಕುಶಾಲ್ ಹೆಚ್.ಎಂ ಹಾಗೂ ಉಮೇಶ್ ಎ.ಎಸ್ ಇವರು ನೆರವೇರಿಸಿದರು. ಸದರಿ ಕಾರ್ಯಕ್ರಮದಲ್ಲಿ 107 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ :** ದಿನಾಂಕ 09.07.2021 ರಂದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ "ಜಿಎಸ್‌ಟಿ ಮತ್ತು ಆದಾಯ ತೆರಿಗೆ" ವಿಷಯದ ಕುರಿತು ಆನ್‌ಲೈನ್ ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ತರಬೇತಿಯ ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ, ಇವರು ನೆರವೇರಿಸಿದರು. ಸದರಿ ತರಬೇತಿಯ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಅನಿಲ್ ಭಾರದ್ವಾಜ್, ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು, ಇವರು ಭಾಗವಹಿಸಿ ಸಹಕಾರಿಗಳಿಗೆ ಅಗತ್ಯ ಮಾಹಿತಿ ನೀಡಿದರು. 110 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಂಡರು.

## "ವ್ಯಾಪಾರ ಅಭಿವೃದ್ಧಿ ನಿರ್ವಹಣೆ" ಕುರಿತು ತರಬೇತಿ ಕಾರ್ಯಕ್ರಮ

**ಶಿವಮೊಗ್ಗ :** ದಿನಾಂಕ 27.07.2021 ರಂದು ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ "ವ್ಯಾಪಾರ ಅಭಿವೃದ್ಧಿ ನಿರ್ವಹಣೆ" ವಿಷಯದ ಕುರಿತು ಆನ್‌ಲೈನ್ ಮೂಲಕ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಎ.ಆರ್. ಪ್ರಸನ್ನ ಕುಮಾರ್, ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ ಇವರು ವಹಿಸಿದ್ದರು. ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಡಾ. ನಂದೀಶ್ ಹಿರೇಮಠ್, ಪ್ರೊಫೆಸರ್, ಮಾನವ ಸಂಪನ್ಮೂಲ ಮತ್ತು ಉದ್ಯಮಶೀಲತೆ, ಬೆಂಗಳೂರು, ಇವರು ಭಾಗವಹಿಸಿ ಅಗತ್ಯ ಮಾಹಿತಿ ನೀಡಿದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ಇವರು ಉಪಸ್ಥಿತರಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಇವರು ಭಾಗವಹಿಸಿದ್ದರು. 114 ಪ್ರತಿನಿಧಿಗಳು ಭಾಗವಹಿಸಿ ತರಬೇತಿ ಪ್ರಯೋಜನ ಪಡೆದುಕೊಂಡರು.

## ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ

**ದಾವಣಗೆರೆ :** ದಿನಾಂಕ 16.07.2021 ರಂದು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖಾ ಕಚೇರಿ, ದಾವಣಗೆರೆ ಇಲ್ಲಿ ದಾವಣಗೆರೆ ಜಿಲ್ಲೆಯ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯಲ್ಲಿ ಸೌಹಾರ್ದ ಸಂಯುಕ್ತ ಸಹಕಾರಿಯ ಪ್ರತಿನಿಧಿಯಾಗಿ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ಇವರು ಭಾಗವಹಿಸಿ ಸಭೆಗೆ ಅಗತ್ಯ ಮಾಹಿತಿ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ದಾವಣಗೆರೆ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರು ವಹಿಸಿದ್ದರು. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಉಪ ನಿರ್ದೇಶಕರು, ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಸಹಕಾರ ಅಭಿವೃದ್ಧಿ ಅಧಿಕಾರಿಗಳು ಹಾಗೂ ಜವಳಿ ಮತ್ತು ನೇಕಾರರ ಮತ್ತು ಶಿಮುಲ್ ಹಾಲು ಒಕ್ಕೂಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

## ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿಯಿಂದ 500 ಜನರಿಗೆ ಆಹಾರ ವಿತರಣೆ




**ಚಿತ್ರದುರ್ಗ :** ಪರಮಪೂಜ್ಯ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಗಳ ಪೀಠಾರೋಹಣ ಅಂಗವಾಗಿ ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿಯಮಿತದಿಂದ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ದಿನಾಂಕ 16-06-2021 ರಿಂದ 22-06-2021 ರವರೆಗೆ 1 ವಾರ ಪರ್ಯಂತ ನಗರದ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ಸುಮಾರು 500 ಜನ ರೋಗಿಗಳು ಹಾಗೂ ರೋಗಿಗಳ ಸಹಾಯಕರಿಗೆ ಆಹಾರದ ಹಾಗೂ ನೀರಿನ ಬಾಟಲ್‌ಗಳನ್ನು ನೀಡಲಾಯಿತು. ದಿನಾಂಕ 19-06-2021 ರಂದು ವಾಸವಿ ರಕ್ತನಿಧಿ ಕೇಂದ್ರದಲ್ಲಿ ರಕ್ತದಾನ ಶಿಬಿರವನ್ನು, ದಿನಾಂಕ 20-06-2021 ಗೋಪೂಜೆಯನ್ನು ನೆರವೇರಿಸಲಾಯಿತು.

## ಸಮಾಲೋಚನಾ ಸಭೆ



**ಬೆಂಗಳೂರು :** ದಿನಾಂಕ 27.07.2021 ರಂದು ಬಸವನಗುಡಿ ವಿಧಾನಸಭಾ ಕ್ಷೇತ್ರದ ಸೌಹಾರ್ದ ಸಹಕಾರಿಗಳ ಸಮಸ್ಯೆಗಳ ಕುರಿತು ಚರ್ಚಿಸಲು ಸಮಾಲೋಚನಾ ಸಭೆಯನ್ನು ಉದಯ ಸೌಹಾರ್ದ ಪತ್ತಿನ ಸಹಕಾರಿ ನಿ, ಉದಯ ಸಹಕಾರ ಭವನ, ಹನುಮಂತ ನಗರ, ಬೆಂಗಳೂರು, ಇಲ್ಲಿ ಆಯೋಜಿಸಲಾಗಿತ್ತು. ಶ್ರೀಯುತ ರವಿಸುಬ್ರಮಣ್ಯ, ಮಾನ್ಯ ವಿಧಾನಸಭಾ ಶಾಸಕರು, ಬಸವನಗುಡಿ ಕ್ಷೇತ್ರ, ಬೆಂಗಳೂರು, ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಸಭೆಯಲ್ಲಿ ಶ್ರೀ ಬಿ.ಎಸ್. ಗಂಡೂರಾವ್, ಮಾನ್ಯ ನಿರ್ದೇಶಕರು, ಶ್ರೀ ಶರಣಗೌಡ ಜಿ ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಶ್ರೀ ನಾರಾಯಣ ಹೆಗಡೆ, ಉಪಪ್ರಧಾನ ವ್ಯವಸ್ಥಾಪಕರು, ಶ್ರೀ ಸಂಜಯ ಕೋರಟಕರ, ಪ್ರಾಂತೀಯ ವ್ಯವಸ್ಥಾಪಕರು, ಬೆಂಗಳೂರು ಪ್ರಾಂತ, ಇವರು ಉಪಸ್ಥಿತರಿದ್ದರು. ಜಿಲ್ಲಾ ಸಂಯೋಜಕರಾದ ರಾಜೇಶ್ ಕೆ.ಎಂ. ಇವರು ಭಾಗವಹಿಸಿದ್ದರು. 62 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.

## ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಕಾರ್ಯನಿರ್ವಹಣಾ ಸಭೆ



**ಕಲಬುರಗಿ :** ದಿನಾಂಕ 21–07–2021 ರಂದು ಕಲಬುರಗಿ ಪ್ರಾಂತೀಯ ಕಚೇರಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರ ಅಧ್ಯಕ್ಷತೆಯಲ್ಲಿ ಕಲಬುರ್ಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಕಾರ್ಯನಿರ್ವಹಣಾ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಯ ಮಾನ್ಯ ನಿರ್ದೇಶಕರಾದ ಶ್ರೀ ವೈ.ಟಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ. ಜಿ. ಪಾಟೀಲ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ. ಹೆಚ್ , ಒಕ್ಕೂಟದ ಪದಾಧಿಕಾರಿಗಳು ಮತ್ತು ನಿರ್ದೇಶಕರು ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಓಂಕಾರ ಮತ್ತು ಶ್ರೀ ಪವನ ಉಪಸ್ಥಿತರಿದ್ದರು.

## ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯದ ಸಹಾಯಕ ನಿಬಂಧಕರಾಗಿ ಶ್ರೀ ಬಿ.ಪಿ ಪ್ರೇಮಾನಂದ ನೇಮಕ



**ಬೆಂಗಳೂರು :** ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯದ ಸಹಕಾರಿಗಳ ಸಹಾಯಕ ನಿಬಂಧಕರಾಗಿ ಶ್ರೀ ಬಿ.ಪಿ ಪ್ರೇಮಾನಂದ ರವರು ನೇಮಕರಾಗಿದ್ದಾರೆ. ಇವರಿಗೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ.ಜಿ. ಪಾಟೀಲ, ಸಹಾಯಕ ಪ್ರಧಾನ ವ್ಯವಸ್ಥಾಪಕಿ ಶ್ರೀಮತಿ ಶೋಭಾ ಹಾಗೂ ತರಬೇತಿ ವ್ಯವಸ್ಥಾಪಕರಾದ ಶ್ರೀ ವಿ.ಜೆ ಕಾರಕೂನ್ ಇವರುಗಳು ಅಭಿನಂದನೆ ಸಲ್ಲಿಸಿದರು.

**ಉಡುಪಿ :** ದೇಶದಲ್ಲಿ ಸಹಕಾರ ಕ್ಷೇತ್ರದ ಕಾರ್ಯ ಚಟುವಟಿಕೆಗಳನ್ನು ಉತ್ತೇಜಿಸುವ ಮೂಲಕ ಸಹಕಾರಿ ಆಂದೋಲನಕ್ಕೆ ಮತ್ತಷ್ಟು ಬಲ ತುಂಬುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಸಹಕಾರ ಸಚಿವಾಲಯ ಎಂಬ ನೂತನ ಸಚಿವಾಲಯವೊಂದನ್ನು ರಚನೆ ಮಾಡಿರುವ ಕುರಿತಂತೆ ಉಡುಪಿ ಪತ್ರಿಕಾ ಭವನದಲ್ಲಿ ದಿನಾಂಕ 8 ಜುಲೈ 2021ರಂದು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ರವರು ಪತ್ರಿಕಾ ಗೋಷ್ಠಿಯನ್ನು ನಡೆಸುವ ಮೂಲಕ ಕೇಂದ್ರ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದರು. ಈ ಸಂಧರ್ಭದಲ್ಲಿ ಉಡುಪಿ ಜಿಲ್ಲಾ ಒಕ್ಕೂಟ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಭಾಸ್ಕರ್ ಕಾಮತ್, ಉಡುಪಿ ಜಿಲ್ಲಾ ಸಹಕಾರ ಭಾರತಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪ್ರಶಾಂತ್ ಶೆಟ್ಟಿ ಸಂಯುಕ್ತ ಸಹಕಾರಿಯ ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ರವರು ಉಪಸ್ಥಿತರಿದ್ದರು.

# ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಹಾಗೂ ನಿರ್ದೇಶಕರುಗಳು ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ



**ಕಲಬುರಗಿ :** ಶ್ರೀ ಶರಣ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಜೇವರ್ಗಿ ಕಲಬುರಗಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ಭೇಟಿ ನೀಡಿ ಆಡಳಿತ ಮಂಡಳಿಯ ಸದಸ್ಯರೊಂದಿಗೆ ಸಹಕಾರಿಯ ಅಭಿವೃದ್ಧಿ ಮತ್ತು ಆರ್ಥಿಕ ಬೆಳವಣಿಗೆಗೆ ಸಲಹೆ–ಸೂಚನೆ ನೀಡಿ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ವೈ.ಟಿ ಪಾಟೀಲ, ಶ್ರೀ ಸಂಜೀವ ಮಹಾಜನ, ಶ್ರೀ ಜಿ. ಶ್ರೀಧರ ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಉಪಸ್ಥಿತರಿದ್ದರು. ಸಹಕಾರಿಯ ವತಿಯಿಂದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಿಗೆ ಹಾಗೂ ನಿರ್ದೇಶಕರುಗಳಿಗೆ ಸನ್ಮಾನಿಸಲಾಯಿತು.



**ಯಾದಗಿರಿ :** ಶಹಪುರ ಸಮೃದ್ಧಿ ಸೌಹಾರ್ದ ಸಹಕಾರಿ ನಿ., ಶಹಪೂರ ಯಾದಗಿರಿ ಸಹಕಾರಿಗೆ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ಭೇಟಿ ನೀಡಿ ಆಡಳಿತ ಮಂಡಳಿಯ ಸದಸ್ಯರೊಂದಿಗೆ ಸಹಕಾರಿಯ ಕಾರ್ಯಚಟುವಟಿಕೆಯ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ವೈ.ಟಿ ಪಾಟೀಲ, ಶ್ರೀ ಸಂಜೀವ ಮಹಾಜನ, ಶ್ರೀ ಜಿ. ಶ್ರೀಧರ ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಉಪಸ್ಥಿತರಿದ್ದರು. ಸಹಕಾರಿಯ ವತಿಯಿಂದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಿಗೆ ಹಾಗೂ ನಿರ್ದೇಶಕರುಗಳಿಗೆ ಸನ್ಮಾನಿಸಲಾಯಿತು.



**ಯಾದಗಿರಿ :** ಮಾತೋಶ್ರೀ ಹೇಮರೆಡ್ಡಿ ಮಲ್ಲಮ್ಮ ಪತ್ತಿನ ಸೌಹಾರ್ದ ಸಹಕಾರಿ ನಿ., ಶಹಪೂರ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ಸಹಕಾರಿಗೆ ಭೇಟಿ ನೀಡಿ ಆಡಳಿತ ಮಂಡಳಿಯ ಸದಸ್ಯರೊಂದಿಗೆ ಸಹಕಾರಿಯ ಕಾರ್ಯಚಟುವಟಿಕೆಯ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ವೈ.ಟಿ ಪಾಟೀಲ, ಶ್ರೀ ಸಂಜೀವ ಮಹಾಜನ , ಶ್ರೀ ಜಿ. ಶ್ರೀಧರ ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಉಪಸ್ಥಿತರಿದ್ದರು. ಸಹಕಾರಿಯ ವತಿಯಿಂದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಿಗೆ ಹಾಗೂ ನಿರ್ದೇಶಕರುಗಳಿಗೆ ಸನ್ಮಾನಿಸಲಾಯಿತು.



**ಬೀದರ :** ರಾಜರಾಜೇಶ್ವರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ, ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ ರವರು ಭೇಟಿ ನೀಡಿ ಆಡಳಿತ ಮಂಡಳಿಯ ಸದಸ್ಯರೊಂದಿಗೆ ಸಹಕಾರಿಯ ಕಾರ್ಯಚಟುವಟಿಕೆಯ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ವೈ.ಟಿ ಪಾಟೀಲ, ಶ್ರೀ ಸಂಜೀವ ಮಹಾಜನ, ಶ್ರೀ ಜಿ. ಶ್ರೀಧರ, ಶ್ರೀ ವಿಶ್ವನಾಥ ಹಿರೇಮಠ, ಶ್ರೀ ಎ.ಆರ್ ಪ್ರಸನ್ನಕುಮಾರ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ ಮೂರನೇ ತಂಡದ ಪರೀಕ್ಷೆಯ ಫಲಿತಾಂಶ

# 3rd Batch Diploma in Cooperation and Banking Management Examination Result

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ದಿನಾಂಕ 26 & 27ನೇ ಜೂನ್ 2021ರಂದು ಸಹಕಾರ ಹಾಗು ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸಿನ 3ನೇ ತಂಡದ ಪರೀಕ್ಷೆಯನ್ನು ಆನ್‌ಲೈನ್ ಮೂಲಕ ನಡೆಸಲಾಗಿತ್ತು.

ಈ ಪರೀಕ್ಷೆಯಲ್ಲಿ 1ನೇ ತಂಡ ಅನುತ್ತೀರ್ಣರಾದ 12ರ ಪೈಕಿ ಒಬ್ಬರು ಮಾತ್ರ ಪರೀಕ್ಷೆಗೆ ಹಾಜರಾಗಿದ್ದರು. ಹಾಗು 2ನೇ ತಂಡದ ಅನುತ್ತೀರ್ಣರಾದ 26 ಅಭ್ಯರ್ಥಿಗಳ ಪೈಕಿ 10 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. 3ನೇ ತಂಡದಿಂದ 404 ಅಭ್ಯರ್ಥಿಗಳ ಪೈಕಿ 387 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

**ಈ ಕೋರ್ಸಿನ ಫಲಿತಾಂಶ ವಿವರಗಳು ಈ ಕೆಳಕಂಡಂತ್ತಿದೆ.**

| | | |
|---|---|---|
| 1. ಒಂದನೇ ತಂಡದಲ್ಲಿ ಒಟ್ಟು | 01 | ಅಭ್ಯರ್ಥಿಯು ಉತ್ತೀರ್ಣರಾಗಿರುತ್ತಾರೆ |
| 2. ಎರಡನೇ ತಂಡದಲ್ಲಿ ಒಟ್ಟು | 07 | ಅಭ್ಯರ್ಥಿಗಳು ಉತ್ತೀರ್ಣರಾಗಿರುತ್ತಾರೆ. |
| 3. ಮೂರನೇ ತಂಡದಲ್ಲಿ ಒಟ್ಟು | 366 | ಅಭ್ಯರ್ಥಿಗಳು ಉತ್ತೀರ್ಣರಾಗಿರುತ್ತಾರೆ. |

********************

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ವತಿಯಿಂದ ನಡೆಸಿದ ಮೂರನೇ ತಂಡದ ಸಹಕಾರ ಹಾಗು ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸಿನ ಪರೀಕ್ಷೆಯ ಫಲಿತಾಂಶದ ವಿವರಗಳು.

**A+ ಗ್ರೇಡ್ ಪಡೆದವರ ಪಟ್ಟಿ**

| Roll No | Marks | Roll No | Marks | Roll No | Marks | Roll No | Marks |
|---|---|---|---|---|---|---|---|
| B3-0283 | 562 | B3-0396 | 584 | B3-0527 | 561 | B3-0658 | 597 |

**A ಗ್ರೇಡ್ ಪಡೆದವರ ಪಟ್ಟಿ**

| Roll No | Marks | Roll No | Marks | Roll No | Marks | Roll No | Marks | Roll No | Marks |
|---|---|---|---|---|---|---|---|---|---|
| B3-0273 | 538 | B3-0306 | 491 | B3-0343 | 494 | B3-0402 | 493 | B3-0461 | 496 |
| B3-0280 | 490 | B3-0307 | 539 | B3-0344 | 507 | B3-0407 | 531 | B3-0462 | 504 |
| B3-0282 | 526 | B3-0311 | 495 | B3-0347 | 522 | B3-0412 | 518 | B3-0478 | 512 |
| B3-0284 | 520 | B3-0314 | 498 | B3-0348 | 533 | B3-0413 | 538 | B3-0483 | 517 |
| B3-0290 | 497 | B3-0319 | 517 | B3-0355 | 539 | B3-0414 | 558 | B3-0496 | 499 |
| B3-0294 | 517 | B3-0324 | 502 | B3-0356 | 500 | B3-0416 | 514 | B3-0506 | 492 |
| B3-0295 | 502 | B3-0325 | 527 | B3-0359 | 499 | B3-0418 | 501 | B3-0510 | 499 |
| B3-0297 | 505 | B3-0326 | 515 | B3-0363 | 498 | B3-0429 | 532 | B3-0526 | 526 |
| B3-0298 | 535 | B3-0327 | 503 | B3-0364 | 511 | B3-0430 | 505 | B3-0528 | 503 |
| B3-0302 | 493 | B3-0332 | 523 | B3-0384 | 504 | B3-0431 | 534 | B3-0533 | 538 |
| B3-0303 | 537 | B3-0336 | 493 | B3-0395 | 535 | B3-0433 | 518 | B3-0554 | 524 |
| B3-0305 | 509 | B3-0342 | 528 | B3-0398 | 507 | B3-0440 | 515 | B3-0562 | 499 |

| | | | | | | | | | |
|---|---|---|---|---|---|---|---|---|---|
| B3-0570 | 544 | B3-0581 | 533 | B3-0636 | 534 | B3-0642 | 522 | B3-0650 | 514 |
| B3-0574 | 493 | B3-0621 | 516 | B3-0637 | 518 | B3-0643 | 505 | B3-0652 | 495 |
| B3-0578 | 541 | B3-0627 | 508 | B3-0640 | 528 | B3-0645 | 516 | B3-0656 | 505 |
| B3-0579 | 492 | B3-0630 | 508 | B3-0641 | 491 | B3-0649 | 515 | B3-0659 | 501 |
| B3-0663 | 524 | B3-0668 | 536 | B3-0672 | 515 | B3-0673 | 532 | B3-0677 | 502 |

## B+ ಗ್ರೇಡ್ ಪಡೆದವರ ಪಟ್ಟಿ

| Roll No | Marks | Roll No | Marks | Roll No | Marks | Roll No | Marks | Roll No | Marks |
|---|---|---|---|---|---|---|---|---|---|
| B3-0276 | 431 | B3-0339 | 483 | B3-0391 | 469 | B3-0458 | 421 | B3-0516 | 446 |
| B3-0277 | 467 | B3-0340 | 463 | B3-0392 | 468 | B3-0460 | 466 | B3-0517 | 484 |
| B3-0278 | 466 | B3-0341 | 480 | B3-0394 | 437 | B3-0467 | 439 | B3-0519 | 435 |
| B3-0279 | 443 | B3-0345 | 482 | B3-0401 | 479 | B3-0474 | 463 | B3-0524 | 489 |
| B3-0281 | 436 | B3-0346 | 464 | B3-0403 | 467 | B3-0479 | 450 | B3-0525 | 463 |
| B3-0285 | 429 | B3-0351 | 484 | B3-0404 | 422 | B3-0480 | 458 | B3-0531 | 476 |
| B3-0286 | 443 | B3-0352 | 466 | B3-0405 | 434 | B3-0482 | 485 | B3-0532 | 467 |
| B3-0287 | 430 | B3-0353 | 471 | B3-0406 | 465 | B3-0485 | 426 | B3-0534 | 443 |
| B3-0291 | 447 | B3-0354 | 453 | B3-0408 | 461 | B3-0486 | 471 | B3-0535 | 470 |
| B3-0292 | 465 | B3-0357 | 437 | B3-0410 | 479 | B3-0487 | 481 | B3-0537 | 487 |
| B3-0296 | 461 | B3-0360 | 455 | B3-0411 | 435 | B3-0488 | 464 | B3-0538 | 426 |
| B3-0300 | 473 | B3-0361 | 437 | B3-0417 | 430 | B3-0490 | 426 | B3-0546 | 424 |
| B3-0301 | 473 | B3-0365 | 435 | B3-0421 | 487 | B3-0491 | 462 | B3-0547 | 438 |
| B3-0304 | 423 | B3-0367 | 454 | B3-0422 | 468 | B3-0492 | 455 | B3-0548 | 465 |
| B3-0309 | 454 | B3-0368 | 420 | B3-0423 | 489 | B3-0495 | 462 | B3-0549 | 455 |
| B3-0313 | 461 | B3-0370 | 431 | B3-0427 | 460 | B3-0504 | 474 | B3-0553 | 468 |
| B3-0315 | 469 | B3-0371 | 453 | B3-0432 | 470 | B3-0505 | 426 | B3-0555 | 487 |
| B3-0316 | 483 | B3-0372 | 468 | B3-0434 | 434 | B3-0507 | 426 | B3-0557 | 427 |
| B3-0317 | 434 | B3-0373 | 474 | B3-0436 | 449 | B3-0508 | 450 | B3-0558 | 470 |
| B3-0320 | 464 | B3-0376 | 477 | B3-0437 | 445 | B3-0509 | 423 | B3-0559 | 431 |
| B3-0321 | 450 | B3-0377 | 472 | B3-0438 | 451 | B3-0511 | 437 | B3-0563 | 434 |
| B3-0322 | 450 | B3-0382 | 470 | B3-0439 | 486 | B3-0512 | 456 | B3-0566 | 479 |
| B3-0334 | 426 | B3-0385 | 456 | B3-0451 | 427 | B3-0513 | 456 | B3-0568 | 436 |
| B3-0335 | 423 | B3-0389 | 420 | B3-0452 | 434 | B3-0514 | 463 | B3-0569 | 474 |
| B3-0337 | 465 | B3-0390 | 426 | B3-0453 | 461 | B3-0515 | 424 | B3-0571 | 486 |

| | | | | | | | | | |
|---|---|---|---|---|---|---|---|---|---|
| B3-0573 | 449 | B3-0587 | 479 | B3-0612 | 443 | B3-0626 | 435 | B3-0647 | 468 |
| B3-0575 | 425 | B3-0588 | 466 | B3-0613 | 425 | B3-0628 | 420 | B3-0651 | 443 |
| B3-0577 | 423 | B3-0590 | 438 | B3-0614 | 473 | B3-0631 | 460 | B3-0653 | 469 |
| B3-0580 | 485 | B3-0591 | 450 | B3-0616 | 437 | B3-0633 | 455 | B3-0654 | 454 |
| B3-0582 | 485 | B3-0597 | 465 | B3-0619 | 454 | B3-0635 | 484 | B3-0655 | 474 |
| B3-0583 | 484 | B3-0603 | 454 | B3-0620 | 470 | B3-0638 | 486 | B3-0657 | 461 |
| B3-0584 | 462 | B3-0607 | 443 | B3-0622 | 450 | B3-0639 | 482 | B3-0660 | 477 |
| B3-0585 | 463 | B3-0610 | 434 | B3-0624 | 426 | B3-0644 | 452 | B3-0661 | 470 |
| B3-0586 | 423 | B3-0611 | 429 | B3-0625 | 428 | B3-0646 | 443 | B3-0665 | 442 |
| B3-0666 | 471 | B3-0669 | 451 | B3-0671 | 459 | B3-0675 | 436 | | |
| B3-0667 | 468 | B3-0670 | 452 | B3-0674 | 448 | B3-0676 | 426 | | |

## B ಗ್ರೇಡ್ ಪಡೆದವರ ಪಟ್ಟಿ

| Roll No | Marks | Roll No | Marks | Roll No | Marks | Roll No | Marks | Roll No | Marks |
|---|---|---|---|---|---|---|---|---|---|
| B3-0274 | 406 | B3-0379 | 380 | B3-0455 | 415 | B3-0502 | 390 | B3-0598 | 358 |
| B3-0288 | 381 | B3-0383 | 417 | B3-0457 | 400 | B3-0503 | 384 | B3-0601 | 400 |
| B3-0289 | 377 | B3-0388 | 392 | B3-0463 | 350 | B3-0520 | 419 | B3-0604 | 376 |
| B3-0299 | 410 | B3-0393 | 352 | B3-0465 | 412 | B3-0521 | 397 | B3-0605 | 375 |
| B3-0310 | 415 | B3-0399 | 396 | B3-0468 | 395 | B3-0529 | 416 | B3-0608 | 396 |
| B3-0318 | 385 | B3-0400 | 373 | B3-0469 | 367 | B3-0536 | 372 | B3-0609 | 378 |
| B3-0323 | 393 | B3-0415 | 390 | B3-0471 | 363 | B3-0539 | 350 | B3-0617 | 415 |
| B3-0328 | 404 | B3-0419 | 354 | B3-0475 | 397 | B3-0541 | 404 | B3-0618 | 405 |
| B3-0329 | 395 | B3-0424 | 352 | B3-0477 | 378 | B3-0544 | 386 | B3-0623 | 401 |
| B3-0330 | 395 | B3-0426 | 418 | B3-0481 | 410 | B3-0552 | 411 | B3-0629 | 417 |
| B3-0331 | 418 | B3-0435 | 405 | B3-0484 | 410 | B3-0565 | 384 | B3-0632 | 410 |
| B3-0333 | 355 | B3-0441 | 400 | B3-0489 | 391 | B3-0567 | 396 | B3-0648 | 397 |
| B3-0349 | 417 | B3-0442 | 378 | B3-0493 | 414 | B3-0572 | 411 | B3-0662 | 404 |
| B3-0350 | 419 | B3-0444 | 361 | B3-0494 | 395 | B3-0576 | 410 | B3-0664 | 407 |
| B3-0358 | 357 | B3-0445 | 396 | B3-0497 | 375 | B3-0589 | 411 | | |
| B3-0362 | 376 | B3-0446 | 380 | B3-0498 | 364 | B3-0592 | 381 | | |
| B3-0366 | 399 | B3-0447 | 387 | B3-0499 | 397 | B3-0594 | 401 | | |
| B3-0369 | 414 | B3-0449 | 369 | B3-0500 | 369 | B3-0595 | 360 | | |
| B3-0374 | 402 | B3-0454 | 364 | B3-0501 | 395 | B3-0596 | 360 | | |

## c+ ಗ್ರೇಡ್ ಪಡೆದವರ ಪಟ್ಟಿ

| Roll No | Marks | Roll No | Marks | Roll No | Marks | Roll No | Marks | Roll No | Marks |
|---|---|---|---|---|---|---|---|---|---|
| B3-0275 | 333 | B3-0375 | 340 | B3-0456 | 331 | B3-0522 | 295 | B3-0602 | 336 |
| B3-0312 | 327 | B3-0380 | 319 | B3-0470 | 319 | B3-0564 | 307 | | |

## ಎರಡನೇ ತಂಡದ ಫಲಿತಾಂಶ

| Roll No | Marks | Grade | Roll No | Marks | Grade | Roll No | Marks | Grade |
|---|---|---|---|---|---|---|---|---|
| B2-0238 | 503 | B+ | B2-0276 | 448 | B+ | B2-0390 | 445 | B+ |
| B2-0239 | 461 | B+ | B2-0370 | 491 | B+ | B2-0440 | 355 | B |
| B2-0256 | 424 | B+ | | | | | | |

## ಮೊದಲನೇ ತಂಡದ ಫಲಿತಾಂಶ

| Roll No | Marks | Grade |
|---|---|---|
| B3-0119 | 333 | c+ |

## ಮಾಹಿತಿಗಾಗಿ :

| 1. 80 and above A+ | 2. Between 70 – 80 is A | 3. Between 60 - 70 is B+ | 4. Between 50- 60 is B | 5. Between 40- 50 is C+ |
|---|---|---|---|---|

## ಫಲಿತಾಂಶ ತಡೆಹಿಡಿಯಲಾದ ವಿವರ

ಈ ಕೆಳಕಂಡ ಅಭ್ಯರ್ಥಿಗಳು ವಿವರಣಾತ್ಮಕ ಉತ್ತರ ಪತ್ರಿಕೆ/ ಅಧ್ಯಯನ ವರದಿಯನ್ನು ಸಂಯುಕ್ತ ಸಹಕಾರಿಗೆ ಸಲ್ಲಿಸದೇ ಇರುವ ಕಾರಣ ಫಲಿತಾಂಶವನ್ನು ತಡೆಹಿಡಿಯಲಾಗಿದೆ.

| | | | | |
|---|---|---|---|---|
| B3-0308 | B3-0397 | B3-0443 | B3-0472 | B3-0523 |
| B3-0386 | B3-0420 | B3-0450 | B3-0476 | B3-0530 |
| B3-0387 | B3-0428 | B3-0459 | B3-0518 | B3-0540 |
| B3-0542 | B3-0606 | B2-0240 | B2-0294 | B2-0439 |
| B3-0545 | | | | |

## ಅನುತ್ತೀರ್ಣರಾದ ಅಭ್ಯರ್ಥಿಗಳ ಪಟ್ಟಿ

| | | | |
|---|---|---|---|
| B3-0293 | B3-0378 | B3-0448 | B3-0473 |

ಸೂಚನೆ : ಹೆಚ್ಚಿನ ಮಾಹಿತಿಗಾಗಿ ಸಂಯುಕ್ತ ಸಹಕಾರಿಯ ವೆಬ್‌ಸೈಟ್ ವೀಕ್ಷಿಸುವುದು. (www.souharda.coop)



**ಸಂಡೂರು :** ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕು ಕೊರೊನಾ ಲಾಕ್‌ಡೌನ್ ಅವಧಿಯಲ್ಲಿ ಸಂಕಷ್ಟದಲ್ಲಿರುವ ಕುಟುಂಬಗಳಿಗೆ ಹಾಗೂ ಆಟೋ ಚಾಲಕರು, ಕ್ಷೌರಿಕರು, ಮತ್ತು ಅಂಗ ವೈಕಲ್ಯ ಹೊಂದಿರುವ ಕುಟುಂಬಗಳೀಗೆ ರೂ. 17,25,000 ವೆಚ್ಚದಲ್ಲಿ 2500 ದಿನಸಿ ಸಾಮಾಗ್ರಿಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಎಸ್ ನಾಗರಾಜ್ ಹಾಗೂ ಆಡಳಿತ ಮಂಡಲಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ರಾಜ್ಯದಲ್ಲಿ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ಡಿಸೆಂಬರ್ 2021ರ ವರೆಗೆ ವಿಸ್ತರಿಸಲು ಮತ್ತು Video Conference / Virtual Meeting ಮೂಲಕ ನಡೆಸಲು ಅನುಮತಿ ನೀಡುವ ಕುರಿತು ಸರ್ಕಾರದ ಸುತ್ತೋಲೆ

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** ರಾಜ್ಯದಲ್ಲಿ ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ಡಿಸೆಂಬರ್ 2021ರ ವರೆವಿಗೆ ವಿಸ್ತರಿಸಲು ಮತ್ತು video conference / virtual meeting ಮೂಲಕ ನಡೆಸಲು ಅನುಮತಿ ನೀಡುವ ಕುರಿತು.

**ಓದಲಾಗಿದೆ:-** ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ:ಆರ್‌ಸಿಎಸ್/ಎಕ್ಸ್ ಎಮ್‌ಸಿ/31/2021-22, ದಿನಾಂಕ:23.07.2021.

*****

**ಪ್ರಸ್ತಾವನೆ:**

ಕೋವಿಡ್-19 ಸಾಂಕ್ರಾಮಿಕ ರೋಗವು ಹರಡುತ್ತಿರುವ ಕಾರಣ 2021-22 ನೇ ಸಾಲಿನ ಸಹಕಾರ ಸಂಘಗಳ ವಾರ್ಷಿಕ ಸಾಮಾನ್ಯ ಸಭೆಗಳನ್ನು ಕಳೆದ ಸಾಲಿನಂತೆ ಡಿಸೆಂಬರ್ 2021ರವರೆಗೆ ವಿಸ್ತರಿಸಿ ಮತ್ತು Video Conference / Virtual Meeting ಮೂಲಕ ನಡೆಸಲು ಅನುಮತಿ ನೀಡುವಂತೆ ರಾಜ್ಯದ ವಿವಿಧ ಸಹಕಾರ ಸಂಸ್ಥೆಗಳು ಮತ್ತು ಸದಸ್ಯರು ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ ಓದಲಾದ ನಿಬಂಧಕರ ಪ್ರಸ್ತಾವನೆಯಲ್ಲಿ ಕೋವಿಡ್-19 ನಿಯಮಾವಳಿಗಳನ್ನು ಅನುಸರಿಸಿ, ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ಎಲ್ಲಿ ಅವಕಾಶವಿರುವುದೋ ಅಂತಹ ಸಹಕಾರ ಸಂಘಗಳು ಭೌತಿಕ ಹಾಜರಾತಿಯೊಂದಿಗೆ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು, ಒಂದು ವೇಳೆ ಆ ರೀತಿ ಸಾಧ್ಯವಾಗದಿದ್ದ ಪಕ್ಷದಲ್ಲಿ ಅಂತಹ ಸಹಕಾರ ಸಂಸ್ಥೆಗಳು Video Conference/ Virtual Meeting ವಿಧಾನವನ್ನು ಅನುಸರಿಸಿ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ಅನುಮತಿ ನೀಡಬಹುದೆಂದು ನಿಬಂಧಕರು ತಿಳಿಸಿರುತ್ತಾರೆ.

ರಾಜ್ಯದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದ 2ನೇ ಅಲೆಯ ಕಾರಣದಿಂದ ಹಾಗೂ 3ನೇ ಅಲೆ ವ್ಯಾಪಿಸುವ ಸಾಧ್ಯತೆ ಇರುವ ಬಗ್ಗೆ ತಜ್ಞರು ಅಭಿಪ್ರಾಯಪಟ್ಟಿರುವ ಹಿನ್ನೆಲೆಯಲ್ಲಿ, 2020-21ನೇ ಸಾಲಿನಲ್ಲಿ ಅನುಮತಿ ನೀಡಿರುವಂತೆ, ಪ್ರಸಕ್ತ ಸಾಲಿನಲ್ಲಿಯೂ ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗಳನ್ನು ನಡೆಸುವ ಅವಧಿಯನ್ನು 25 ಸೆಪ್ಟೆಂಬರ್ ರಿಂದ 25 ಡಿಸೆಂಬರ್ 2021ವರವಿಗೆ ವಿಸ್ತರಿಸಲು ಹಾಗೂ ಈ ಸಭೆಗಳನ್ನು Video Conference/ Virtual Meeting ಮೂಲಕವೂ ನಡೆಸಲು ಅನುಮತಿ ನೀಡುವುದು ಸೂಕ್ತವೆಂದು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಇ 60 ಸಿಎಲ್‌ಎಮ್ 2021 (ಇ) ಬೆಂಗಳೂರು, ದಿನಾಂಕ: 04.08.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 70ರಡಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ

....2

-2-

ಕ್ರಮವಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27(1)ರಲ್ಲಿ ಸಹಕಾರ ಸಂಘಗಳ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 27(ಹೆಚ್-3), 30(1) ಹಾಗೂ 60(1)ಗಳಲ್ಲಿ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ಸೆಪ್ಟೆಂಬರ್ ತಿಂಗಳ ಇಪ್ಪತ್ತೈದನೇ ದಿನದೊಳಗೆ ನಡೆಸತಕ್ಕದ್ದು ಎಂಬ ಅವಕಾಶವನ್ನು ಸಡಿಲಿಸಿ, ಡಿಸೆಂಬರ್ ತಿಂಗಳ ಇಪ್ಪತ್ತೈದನೇ ದಿನದೊಳಗೆ ನಡೆಸಲು ಹಾಗೂ ಕೋವಿಡ್-19 ನಿಯಮಾವಳಿಗಳನ್ನು ಅನುಸರಿಸಿ, ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ಎಲ್ಲಿ ಅವಕಾಶವಿರುವುದೋ ಅಂತಹ ಸಹಕಾರ ಸಂಸ್ಥೆಗಳು ಭೌತಿಕ ಹಾಜರಾತಿಯೊಂದಿಗೆ ಮತ್ತು ಒಂದು ವೇಳೆ ಆ ರೀತಿ ಅವಕಾಶವಿಲ್ಲದಿದ್ದ ಪಕ್ಷದಲ್ಲಿ ಅಂತಹ ಸಹಕಾರ ಸಂಘಗಳು/ಸೌಹಾರ್ದ ಸಹಕಾರಿಗಳು Video Conference/ Virtual Meeting ವಿಧಾನವನ್ನು ಅನುಸರಿಸಿ 2021-22ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನುಈ ಕೆಳಕಂಡ ನಿಬಂಧನೆಗೊಳಪಟ್ಟು ನಡೆಸಲು ಅನುಮತಿ ನೀಡಿ ಆದೇಶಿಸಿದೆ.

- ಸರ್ವ ಸದಸ್ಯರ ಸಭೆಯನ್ನು video conference / virtual meeting ಮೂಲಕವೂ ನಡೆಸಬಹುದು.
- ಸರ್ವ ಸದಸ್ಯರ ಸಭೆ ನಡೆಯುವ ದಿನಾಂಕ ಮತ್ತು ವೇಳೆಯನ್ನು ದಿನಪತ್ರಿಕೆಯಲ್ಲಿ ಪ್ರಕಟಿಸುವುದು.
- ಸಭೆಯ ನೋಟೀಸು ಹಾಗೂ ಇನ್ನಿತರೆ ದಾಖಲಾತಿಗಳನ್ನು ಸಂಘದ ವೆಬ್‌ಸೈಟ್ ಮೂಲಕ ಪ್ರಚುರಗೊಳಿಸುವುದು ಹಾಗೂ ಹಾಲಿ ಅನುಸರಿಸುತ್ತಿರುವ ಪದ್ಧತಿಯಂತೆ ನೋಟೀಸುಗಳನ್ನು ಅಂಚೆಯ ಮೂಲಕ ರವಾನಿಸಲು ಸಹ ಕ್ರಮವಿಡತಕ್ಕದ್ದು.
- ಸದಸ್ಯರಿಗೆ ಡಿವಿಡೆಂಡ್‌ಗಳನ್ನು ಇಸಿಎಸ್ ಮೂಲಕ ಅವರುಗಳ ಖಾತೆಗೆ ಪಾವತಿಸಲು ಕ್ರಮವಿಡುವುದು.
- ಇಂಥಹ ಸಭೆಯ ನಡವಳಿಗಳನ್ನು ಅಧಿಕೃತವಾಗಿ ರೆಕಾರ್ಡ್ ಮಾಡಿ ದಾಖಲಿಸುವ ತಂತ್ರಜ್ಞಾನ ಅಳವಡಿಸಿಕೊಳ್ಳತಕ್ಕದ್ದು.
- ಸರ್ವ ಸದಸ್ಯರ ಸಭೆ ನಡೆಸುವ ಸ್ಥಳದಲ್ಲಿ ಕೋವಿಡ್-19ರ ನಿಯಮಾವಳಿಗಳಿಗೆ ಒಳಪಟ್ಟು ಹಾಜರಾತಿಯನ್ನು ನಿರ್ವಹಿಸಿ ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ಅಧಿನಿಯಮಗಳನ್ವಯ ನಮೂದಿಸಿರುವ ಅಂಶಗಳನ್ನು ಕಾರ್ಯಸೂಚಿಯಲ್ಲಿ ಅಳವಡಿಸಿಕೊಂಡು ಹಾಲಿ ಪದ್ಧತಿಯಂತೆ ನಡವಳಿಗಳನ್ನು ನಡೆಸಲು ಕ್ರಮವಹಿಸತಕ್ಕದ್ದು.
- ಸರ್ವ ಸದಸ್ಯರ ಸಭೆ ನಡೆಸಲು ಕಾಲಕಾಲಕ್ಕೆ ಸರ್ಕಾರವು ಹೊರಡಿಸುವ ಕೋವಿಡ್ ಮಾರ್ಗಸೂಚಿಗಳನ್ನು ಮತ್ತು ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ. ವೆಂಕಟಸ್ವಾಮಿ) 4/8
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ,
ಸರ್ಕಾರದ ಜಂಟಿ ಕಾರ್ಯದರ್ಶಿ,

**ತಿದ್ದುಪಡಿ ಆದೇಶ**

ಸರ್ಕಾರದ ಆದೇಶ ಸಂಖ್ಯೆ: ಸಇ 60 ಸಿಎಲ್‌ಎಮ್ 2021(ಇ), ದಿನಾಂಕ: 04.08.2021ರ ಆದೇಶದ ಪ್ರಸ್ತಾವನೆ ಹಾಗೂ ಆದೇಶದ ಭಾಗದಲ್ಲಿ **"2021-2022"** ಎಂದಿರುವುದನ್ನು **"2020-2021"** ಎಂದು ತಿದ್ದಿ ಓದಿಕೊಳ್ಳತಕ್ಕದ್ದು. ಇನ್ನುಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ. ವೆಂಕಟಸ್ವಾಮಿ) 5/8
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ,
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

# ಸರ್ಕಾರದ ಸಭೆ ಸಮಾರಂಭಗಳಲ್ಲಿ ಯಾವುದೇ ರೀತಿಯ ಕಾಣಿಕೆಗಳನ್ನು ನೀಡದಿರುವ ಕುರಿತು ರಾಜ್ಯ ಸರ್ಕಾರದ ಆದೇಶ

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 59 ಹೆಚ್‌ಪಿಎ 2021

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:10.08.2021

**ಸುತ್ತೋಲೆ**

**ವಿಷಯ:** ಸರ್ಕಾರದ ಸಭೆ ಸಮಾರಂಭಗಳಲ್ಲಿ ಯಾವುದೇ ರೀತಿಯ ಕಾಣಿಕೆಗಳನ್ನು ನೀಡದಿರುವ ಬಗ್ಗೆ ಸೂಚನೆಗಳು.

******

ರಾಜ್ಯ ಸರ್ಕಾರ ಮತ್ತು ಸರ್ಕಾರದ ಸ್ವಾಮ್ಯಕ್ಕೊಳಪಡುವ ಸಂಸ್ಥೆಗಳು ನಡೆಸುವ ಸಭೆ ಮತ್ತು ಸಮಾರಂಭಗಳಲ್ಲಿ ಹೂಗುಚ್ಛ, ಹಾರ, ತುರಾಯಿ, ಹಣ್ಣಿನ ಬುಟ್ಟಿ, ಶಾಲು, ನೆನಪಿನ ಕಾಣಿಕೆ ಇತ್ಯಾದಿ ಯಾವುದೇ ರೀತಿಯ ಕಾಣಿಕೆಗಳನ್ನು ನೀಡಬಾರದೆಂದು ಈ ಮೂಲಕ ನಿರ್ದೇಶಿಸಿದೆ. ಬದಲಾಗಿ ಕನ್ನಡ ಪುಸ್ತಕಗಳನ್ನು ನೀಡಬಹುದು.

ಈ ನಿರ್ದೇಶನವನ್ನು ಚಾಚು ತಪ್ಪದೇ ಅನುಷ್ಠಾನಗೊಳಿಸಲು ಸಂಬಂಧಪಟ್ಟ ಸರ್ಕಾರದ ಎಲ್ಲಾ ಇಲಾಖೆಗಳು ಮತ್ತು ರಾಜ್ಯ ಸರ್ಕಾರದ ಸ್ವಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳು ತಮ್ಮ ಅಧೀನದಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ಸೂಚಿಸುವಂತೆ ತಿಳಿಸಿದೆ.

([illegible]. ರವಿ ಕುಮಾರ್)
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಪ್ರತಿಗಳು:**

1) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
2) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
3) ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು.
4) ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
5) ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ.
6) ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್.
7) ಎಲ್ಲಾ ವಿಭಾಗಾಧಿಕಾರಿಗಳು.
8) ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
9) ಎಲ್ಲಾ ಜಿಲ್ಲಾಧಿಕಾರಿಗಳು.
10) ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
11) ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು.
12) ಪತ್ರಿಕಾ ಪ್ರಕಟಣೆ / ಹೆಚ್ಚುವರಿ ಪ್ರತಿಗಳು.

**ಮಾಹಿತಿಗಾಗಿ:**

1) ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸು ಇಲಾಖೆ ಇವರ ಆಪ್ತ ಕಾರ್ಯದರ್ಶಿ.

# 2021ರ ಸಮಾಲೋಚನಾ ಸಭೆಯಲ್ಲಿನ ಪ್ರಶ್ನೋತ್ತರಗಳ ಮಾಹಿತಿ



ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ಯವರ ನೇತೃತ್ವದಲ್ಲಿ ರಾಜ್ಯದಾದ್ಯಂತ ಸಂಪರ್ಕ ಸಭೆಗಳು ನಡೆದಿವೆ. ಈ ಸಂಪರ್ಕ ಸಭೆಗಳಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳು ಮತ್ತು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಅಧಿಕಾರಿಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಆಯಾ ಆಯಾ ಜಿಲ್ಲೆಯಲ್ಲಿ ನಡೆದ ಸಂಪರ್ಕ ಸಭೆಯಲ್ಲಿ ಉಪಸ್ಥಿತರಿದ್ದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳು ಕೇಳಿದ ಪ್ರಶ್ನೆಗಳಿಗೆ ತಜ್ಞರಾದ ಶ್ರೀ ಸಿ.ಎನ್ ಪರಶಿವಮೂರ್ತಿ ಯವರಿಂದ ಉತ್ತರಗಳನ್ನು ಪಡೆದು ನಿಮ್ಮ ಅವಗಾಹನೆಗಾಗಿ ಪ್ರಕಟಿಸಿದೆ.

## ಪ್ರಶ್ನೆಗಳು ಹಾಗೂ ಉತ್ತರಗಳು

**1. ಸೌಹಾರ್ದ ಸಹಕಾರಿಗಳು ಸರಕಾರಿ ಬಾಂಡ್‌ಗಳಲ್ಲಿ ಹೂಡಿಕೆ ಮಾಡಲು ಅವಕಾಶವಿದೆಯೇ?**

ಕಾಯ್ದೆ ಕಲಂ 18ರಲ್ಲಿ ಸಹಕಾರಿಗೆ ಅಗತ್ಯವಾಗಿರದಂತಹ ನಿಧಿಗಳಲ್ಲಿ ವ್ಯವಹಾರದಿಂದ ಹೊರಗಡೆ ಬೇರೆಯಡಿಯಲ್ಲಿ ಅಂದರೆ

ಎ) ಸಹಕಾರದಿಂದ ಅನುಮೊದಿತವಾದ ಯಾವುದೇ ಭದ್ರತೆಗಳಲ್ಲಿ ಅಥವಾ

ಬಿ) ಯಾವುದೇ ಸಹಕಾರಿ ಬ್ಯಾಂಕ್ ಅಥವಾ ಅನುಸೂಚಿತ ಬ್ಯಾಂಕಿನಲ್ಲಿ ಹೂಡಬಹುದು ಅಥವಾ ಠೇವಣಿ ಇಡಬಹುದು. ಅದರೆ ಒಂದು ಸಹಕಾರಿಯ ಬ್ಯಾಂಕಿನ ಸಂದರ್ಭದಲ್ಲಿ ಅಂತಹ ಹೂಡಿಕೆಯು ರಿಸರ್ವ್ ಬ್ಯಾಂಕ್ ಕಾಲಕಾಲಕ್ಕೆ ಹೊರಡಿಸಿದ ಸೂಚನೆ ಮತ್ತು ನಿಬಂಧನೆಗಳಿಗೆ ಅನುಸಾರವಾಗಿ ಮಾಡಿರತಕ್ಕದು ಎಂದಿದೆ. ಆದ್ದರಿಂದ ಸರ್ಕಾರಿ ಬ್ಯಾಂಡ್‌ಗಳಲ್ಲಿ ಹೂಡಿಕೆ ಮಾಡಬಹುದು.

**2. ಸೌಹಾರ್ದ ಸಹಕಾರಿಗಳು ಚುನಾವಣೆ ಪ್ರಸ್ತಾವನೆಯನ್ನು ಎಲ್ಲಿ ಸಲ್ಲಿಸಬೇಕು?**

ಸೌಹಾರ್ದ ಸಹಕಾರಿ ನಿಯಮ 2004ರ ನಿಯಮ 5ರಲ್ಲಿ ಸಹಕಾರಿ ಚುನಾವಣೆ ನಡೆಸುವ ಜವಾಬ್ದಾರಿಯನ್ನು ಸಹಕಾರಿ ಚುನಾವಣಾ ಪ್ರಾಧಿಕಾರಕ್ಕೆ ವಿಹಿತವಾಗಿದೆ. ಸಹಕಾರಿ ಆಡಳಿತ ಮಂಡಲಿ ಅದರ ಅವಧಿ ಮುಗಿಯುವ 6 ತಿಂಗಳ ಮೊದಲು ಚುನಾವಣಾ ಪ್ರಾಧಿಕಾರಕ್ಕೆ, ಮಂಡಳಿ ಠರಾವಿನ ಜೊತೆ ಕರಡು ಮತದಾರರ ಪಟ್ಟಿಯನ್ನು ಲಗತ್ತಿಸಿ ಮಂಡಲಿ ಚುನಾವಣೆ ಪ್ರಸ್ತಾವನೆ ಸಲ್ಲಿಸಬೇಕು. ಕಲಂ 5ಎ ರ ಅನ್ವಯ ಮಂಡಲಿ ಚುನಾವಣೆಯನ್ನು ಚುನಾವಣಾ ಪ್ರಾಧಿಕಾರ ನಡೆಸುತ್ತದೆ.

**3. ಥರ್ಡ್ ಪಾರ್ಟಿ ಚೆಕ್ ಕ್ಲೀಯರೆನ್ಸ್ ವ್ಯವಸ್ಥೆಯನ್ನು ಸೌಹಾರ್ದ ಸಹಕಾರಿಗಳು ನೀಡಬಹುದೇ, ಅನುಸರಿಸಬೇಕಾದ ಕ್ರಮವೇನು?**

ಭಾರತೀಯ ರಿಸರ್ವ್ ಬ್ಯಾಂಕ್ ಈ ಬಗ್ಗೆ ಅಧಿಕೃತ ಸೂಚನೆ ಹೊರಡಿಸಿದ್ದು ಅದರಲ್ಲಿ ಸಹಕಾರಿ ಹೆಸರು ಸೇರಿದ್ದರೆ ನೀವು ಈ ವ್ಯವಹಾರವನ್ನು ಮಾಡಬಹುದು.

**4. ಸಾಲ ಸುಸ್ತಿದಾರರು ಹಾಗೂ ಜಾಮೀನುದಾರರು ಮರಣ ಹೊಂದಿರುತ್ತಾರೆ. ಸಾಲವನ್ನು ಯಾವ ರೀತಿ ವಸೂಲಿ ಮಾಡಬೇಕು?**

ಸಾಲ ಪಡೆದವರು ಮತ್ತು ಜಾಮೀನುದಾರರು ಮರಣ ಹೊಂದಿದ್ದರೆ ಅವರು ಸಹಕಾರಿಗೆ ಖಾತ್ರಿಯಾಗಿ ನೀಡಿದ್ದ ಆಸ್ತಿಯ ಮೇಲೆ ದಾವಾ ಪ್ರಕರಣ ದಾಖಲಿಸಬೇಕು. ಇದಕ್ಕೆ ಪೂರಕವಾಗಿ ಸಾಲದಾರನ ಮತ್ತು ಜಾಮೀನುದಾರರ ಕಾನೂನು ವಾರಸುದಾರರನ್ನು ಕಕ್ಷಿದಾರರನ್ನಾಗಿ ಮಾಡಬೇಕು. ಮರಣ ಹೊಂದಿದ 90 ದಿನದೊಳಗಾಗಿ ಮರಣ ಪತ್ರವನ್ನು ಪಡೆದು ಸುಸ್ತಿಸಾಲದ ಮೇಲೆ ಕ್ರಮ ಜರುಗಿಸುವುದು ಸಹಕಾರಿಯ ಜವಾಬ್ದಾರಿ. ಸುಸ್ತಿ ಆದ 6 ವರ್ಷದೊಳಗಾಗಿ ವಸೂಲಾತಿ ಕ್ರಮವನ್ನು ಜರುಗಿಸಬೇಕು. (ಕಲಂ 40 ಅನ್ವಯ)

**5. ಆಡಳಿತ ಮಂಡಲಿ ಚುನಾವಣೆ ನಡೆದು 30 ತಿಂಗಳ ನಂತರ ನಿರ್ದೇಶಕರು ಮರಣ ಹೊಂದಿರುತ್ತಾರೆ. ಮುಂದಿನ ಚುನಾವಣೆ ಪ್ರಕ್ರೀಯೆ ಕುರಿತು ಮಾಹಿತಿ ನೀಡಿ.**

ಕಾಯ್ದೆ ಕಲಂ 29ರ ಅನ್ವಯ ಆಡಲಿತ ಮಂಡಲಿ ಅವಧಿ 2 1/2 ವರ್ಷಕ್ಕಿಂತ ಹೆಚ್ಚಾಗಿದ್ದರೆ ಆ ನಂತರದ ಅವಧಿಯಲ್ಲಿ ಖಾಲಿಯಾದ ಸ್ಥಾನವನ್ನು ತುಂಬಲು ಆಡಳಿತ ಮಂಡಳಿಗೆ ಅಧಿಕಾರ ಇದೆ. ಅದೇ ಯಾವ ಕ್ಷೇತ್ರದ ಸ್ಥಾನ ಖಾಲಿಯಾಗಿದೆಯೋ, ಅದೇ ಕ್ಷೇತ್ರದಿಂದ ಮಂಡಲಿಯ ಬಹುಮತದ ಸದಸ್ಯರು ಸಹಮತದಿಂದ ಸೇರಿಸಿಕೊಳ್ಳಲು ಕಲಂ 29 ರಲ್ಲಿ ಅವಕಾಶ ಕಲ್ಪಿಸಿದೆ.

**6. ಒಬ್ಬ ವ್ಯಕ್ತಿಗೆ ಸಹಕಾರಿಯು ಎಷ್ಟು ಮೊತ್ತದವರೆಗೆ ಸಾಲ ನೀಡಬಹುದು, ಯಾವುದೇ ಮಿತಿ ಇದೆಯೇ?**

ಒಬ್ಬ ವ್ಯಕ್ತಿಗೆ ಎಷ್ಟು ಮೊತ್ತದ ಸಾಲ ನೀಡಬೇಕೆಂಬುದನ್ನು ನಿಮ್ಮ ಉಪವಿಧಿಗಳಲ್ಲಿ ಸೇರಿಸಬೇಕು. ಈ ಮಿತಿಯನ್ನು ನಿಗದಿ ಪಡಿಸುವಾಗ ನಿಮ್ಮ ಸಹಕಾರಿಯ ಆರ್ಥಿಕ ಸ್ಥಿತಿಯನ್ನು ಆಧಾರಿಸಿ ಮಿತಿಯನ್ನು ನಿಗಧಿಪಡಿಸಬೇಕು.

**7. ಸುಸ್ತಿಯಾಗಿರುವ ಸಾಲಗಾರರಿಗೆ ನೋಟೀಸ್ ಜಾರಿ ಮಾಡಿದರೂ ಸಹ ಮರುಪಾವತಿಸದ ಸಾಲಗಾರರ ವಿರುದ್ಧ ತೆಗೆದುಕೊಳ್ಳಬಹುದಾದ ಕ್ರಮದ ಕುರಿತು ಮಾಹಿತಿ ನೀಡಿ.**

ಸುಸ್ತಿಸಾಲ ಆದ ನಂತರ ಆಡಳಿತ ಮಂಡಲಿ ದಾವಾ ಪ್ರಕರಣ ದಾಖಲು ಮಾಡಲು ತೀರ್ಮಾನಿಸಬೇಕು. ಹಾಗೂ ಕಲಂ 31ರ ಅನ್ವಯ ಮುಖ್ಯ ಕಾರ್ಯನಿರ್ವಾಹಕನು ಸಾಲ ಸುಸ್ತಿ ಆದ ಕೂಡಲೇ ದಾವಾ ಪ್ರಕರಣ ದಾಖಲು ಮಾಡಲು ಅಧಿಕಾರ ವಿದ್ದು ಅದನ್ನು ಆಡಳಿತ ಮಂಡಲಿ ಒಂದು ಠಾರವಿನ ಮೂಲಕ ಅಧಿಕೃತಪಡಿಸಬಹುದು. (ಕಲಂ 39, 40, 41 ರ ಅನ್ವಯ)

**8. ಸಾಲ ಮಂಜೂರು ಮಾಡಿ 10 ವರ್ಷವಾಗಿದೆ, ಪ್ರಸ್ತುತ ದಾವಾ ದಾಖಲು ಮಾಡಲು ಅವಕಾಶ ಇದೆಯೇ?**

ಸಾಲ ಮಂಜೂರು ಮಾಡಿ 10 ವರ್ಷಗಳಾಗಿದ್ದರೂ ದಾವಾ ದಾಖಲು ಮಾಡಲು ಅವಕಾಶ ಇದೆಯೇ ಎಂಬ ಪ್ರಶ್ನೆಗೆ ಕಲಂ 40ರ ಅನ್ವಯ ದಾವಾ ದಾಖಲಿಸಲು ಅವಧಿಯನ್ನು ನಿಗಧಿಪಡಿಸಿದೆ. ಸಾಲ ಮಂಜೂರು ಆದ 6 ವರ್ಷದೊಳಗೆ ದಾವಾ ದಾಖಲಿಸಬೇಕು. ದಾವಾ ದಾಖಲಿಸಲು ಈ ಅವಧಿಯೊಳಗೆ ಸಾಧ್ಯವಾಗದಿದ್ದರೂ ವಿಳಂಬ ವಿನಾಯಿತಿಗೆ ಸಾಕಾರಣಗಳನ್ನು ನೀಡಿ ಪ್ರತ್ಯೇಕ ಅರ್ಜಿಯನ್ನು ದಾವಾ ಪ್ರಕರಣ ದಾಖಲಿಸಿದ ಅಧಿಕಾರಿಯ ಮುಂದೆ ಸಲ್ಲಿಸಬೇಕು. ಸಾಕಾರಣವೆಂದರೆ ನಿರ್ಲಕ್ಷ ತನದಿಂದ ದಾಖಲಿಸಿದ್ದರೆ

ಅದು ಸಕರಣವಾಗುವುದಿಲ್ಲ. ಉದ್ದೇಶ ಪೂರಕವಾಗಿ ದಾವಾ ದಾಖಲಿಸಿದ್ದಿರೆ ಸಂಬಂಧ ಪಟ್ಟವರ ಮೇಲೆ ಶಿಸ್ತು ಕ್ರಮ ಕೈಗೊಳಲು ಅವಕಾಶ ವಿದೆ. (ಚುನಾವಣೆಗೆ ಸಂಬಂಧ ಪಟ್ಟ ಪ್ರಕರಣಗಳನ್ನು ಚುನಾವಣೆ ದಿನಾಂಕದಿಂದ 30 ದಿವಸದೊಳಗಾಗಿ ಮತ್ತು ಸೇವಾ ನಿಯಮಗಳಿಗೆ ಸಂಬಂಧ ಪಟ್ಟಂತೆ ದಾವಾ ದಾಖಲಿಸಲು 12 ತಿಂಗಳ ಅವಧಿ ನಿಗಧಿಪಡಿಸಲಾಗಿದೆ.)

**9. ಆಕಸ್ಮಿಕವಾಗಿ ಖಾಲಿಯಾಗಿರುವ ಅಧ್ಯಕ್ಷರ ಸ್ಥಾನವನ್ನು ಭರ್ತಿ ಮಾಡಿಕೊಳ್ಳುವುದು ಹೇಗೆ?**

ಕಾಯ್ದೆ ಕಲಂ 28ಎ ಮತ್ತು ನಿಯಮ 6(2) ಪದಾಧಿಕಾರಿಗಳ ಅಧ್ಯಕ್ಷರ ಸ್ಥಾನ ಭರ್ತಿ ಮಾಡುವಾಗ ಅನುಸರಿಸಬೇಕಾಗ ನಿಯಮಗಳನ್ನು ಉಲ್ಲೇಖಿಸಿದೆ. ಅಂದರೆ ಸಹಕಾರಿ ಚುನಾವಣಾ ಪ್ರಾಧಿಕಾರ ಚುನಾವಣಾಧಿಕಾರಿಯನ್ನು ನೇಮಿಸುತ್ತದೆ. ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕ ಅಧ್ಯಕ್ಷರ ಸ್ಥಾನ ಖಾಲಿಯಾದ 7 ದಿವಸದೊಳಗಾಗಿ ಚುನಾವಣಾ ಪ್ರಾಧಿಕಾರಕ್ಕೆ / ನಿಬಂಧಕರಿಗೆ ಪತ್ರದ ಮೂಲಕ ತಿಳಿಸತಕ್ಕದ್ದು ಮತ್ತು ಅಧ್ಯಕ್ಷರ ಸ್ಥಾನ ಖಾಲಿಯಾದ ದಿನಾಂಕದಿಂದ 15 ದಿವಸಗಳ ನಂತರದಲ್ಲಿ ಚುನಾವಣಾ ಪ್ರಾಧಿಕಾರ ಚುನಾವಣಾ ಪ್ರಕ್ರಿಯೆಯನ್ನು ಪ್ರಾರಂಭಿಸುತ್ತದೆ.

**10. ಲೆಕ್ಕ ಪರಿಶೋಧನಾ ವರದಿಯನ್ನು ಲೆಕ್ಕಪರಿಶೋಧಕರು ನೀಡದಿದ್ದರೆ ಮುಂದಿನ ಕ್ರಮವೇನು?**

ಸಹಕಾರಿಯ ಲೆಕ್ಕಪರಿಶೋಧನೆಯನ್ನು ಸಾಮಾನ್ಯ ಸಭೆ ನೇಮಿಸಿದ ಲೆಕ್ಕಪರಿಶೋಧನಾ ಅಧಿಕಾರಿಯಿಂದ ಸೆಪ್ಟೆಂಬರ್ 1ನೇ ತಾರೀಖಿನ ಒಳಗಾಗಿ ಪಡೆಯುವುದು ಸಹಕಾರಿಯ ಜವ್ದಾದಾರಿ. ಈ ಅವಧಿಯಲ್ಲಿ ಆಡಿಟ್ ವರದಿ ಪಡೆಯದಿದ್ದರೆ ಮಂಡಲಿ ಪ್ರತಿಯೊಬ್ಬ ಸದಸ್ಯರು ಅನರ್ಹತೆಗೆ ಒಳಗಾಗುತ್ತಾನೆ. ಆದ್ದರಿಂದ ಆಡಿಟ್ ಪಡೆಯುವುದು ಮಂಡಲಿಯ ಜವಾಬ್ದಾರಿ. ಸಹಕಾರಿಯ ನೇಮಿಸಿದ ಲೆಕ್ಕಪರಿಶೋಧನಾ ಅಧಿಕಾರಿ ವರದಿಯನ್ನು ನೀಡದಿದ್ದರೆ ಅಥವಾ ನೀಡುವುದಿಲ್ಲವೆಂದು ಮಂಡಲಿಯ ಗಮನಕ್ಕೆ ಬಂದರೆ ಅದನ್ನು ಆಡಳಿತ ಮಂಡಲಿ ಠಾರವಿನ ಮೂಲಕ ಲೆಕ್ಕಪರಿಶೋಧನಾ ಇಲಾಖೆಯ ನಿರ್ದೇಶಕರು ಪತ್ರದ ಮೂಲಕ ತಿಳಿಸಬೇಕು. ಲೆಕ್ಕ ಪರಿಶೋಧನಾ ಅಧಿಕಾರಿಯನ್ನು ಬದಲಾಯಿಸುವ ಅಧಿಕಾರ ಇಲ್ಲದೆ ಇರುವುರುದರಿಂದ ಅಥವಾ ಇದ್ದರೂ ಅದನ್ನು ಚಲಾಯಿಸುವ ಅವಧಿ ಇಲ್ಲದೆ ಇರುವುದಿಲ್ಲ ಹೊಸ ಲೆಕ್ಕ ಅಧಿಕಾ-ರಿಯನ್ನು ನೇಮಿಸಲು ಆಡಿಟ್ ಇಲಾಖೆಯ ನಿರ್ದೇಶಕರಿಗೆ ವಿನಂತಿ ಮಾಡತಕ್ಕದ್ದು.

**11. ಸದಸ್ಯರ ಖಾತೆಯಿಂದ ಸದಸ್ಯರ ಖಾತೆಗೆ ಹಣ ವರ್ಗಾವಣೆ ಮಾಡಬಹುದೇ?**

ಒಬ್ಬ ಸದಸ್ಯರ ಖಾತೆಯಿಂದ ಮತ್ತೊಂದು ಸದಸ್ಯನ ಖಾತೆಗೆ ಹಣ ವರ್ಗಾವಣೆ ಮಾಡಬಹುದೆಂಬುದರ ಬಗ್ಗೆ ಯಾವ ಉದ್ದೇಶದಿಂದ ವರ್ಗಾಯಿಸಬೇಕೆಂದು ಮಂಡಲಿ ತೀರ್ಮಾನಿಸತಕ್ಕದ್ದು. ಆದರೆ ಒಬ್ಬರ ಶೇರು ಖಾತೆಯಿಂದ ಮತ್ತೊಬ್ಬರ ಶೇರು ಖಾತೆಗೆ ವರ್ಗಾವಣೆ ಮಾಡಬೇಕಾದ್ದರೆ ಅದು ರಾಜೀನಾಮೆ ಮೂಲಕ ಅಥವಾ ಮರಣ ಮೂಲಕ ಆಗಿದ್ದರೆ, ಆಡಳಿತ ಮಂಡಲಿ ತೀರ್ಮಾನದ ಮೂಖಾಂತರ ಆ ಖಾತೆಗೆ ನಾಮ ನಿರ್ದೇಶನ ವ್ಯಕ್ತಿಯ ಮೂಲಕ ಅರ್ಜಿ ಪಡೆದು ವರ್ಗಾವಣೆ ಮಾಡಬಹುದು. ಆದರೆ ಒಬ್ಬ ಠೇವಣಿದಾರರ ಹಣವನ್ನು ಮತ್ತೊಂದು ಠೇವಣಿದಾರರ ಖಾತೆಗೆ ವರ್ಗಾವಣೆ ಮಾಡಬೇಕಾದರೆ ಅದರ ಉದ್ದೇಶವನ್ನು ಆಡಳಿತ ಮಂಡಲಿ ಪರಿಶೀಲಿಸಿ ಅಗತ್ಯವಿದ್ದಾಗ ಮಾತ್ರ ವರ್ಗಾವಣೆ ಮಾಡಬಹುದು. ಸಾಲ ಮರುಪಾವತಿಗೆ ಇಬ್ಬರ ಒಪ್ಪಿಗೆಯಿಂದ ಹೊಂದಾಣಿಕೆ ಮಾಡಬಹುದು.

**12. ಸೌಹಾರ್ದ ಕಾಯ್ದೆಯಂತೆ ದಾವಾ ದಾಖಲಾತಿ ಅವಧಿಯೇನು?**

ಕರ್ನಾಟಕ ಸೌಹಾರ್ದ ಕಾಯ್ದೆ ಕಲಂ 40 ರಡಿ ಹಣಕಾಸು ವ್ಯವಸ್ಥೆಗೆ ಸಂಬಂಧ ಪಟ್ಟಂತೆ, ಸಾಲ ಮಂಜೂರಾದ ದಿನಾಂಕದಿಂದ ಆ ಆರು ವರ್ಷಧ ಅವಧಿಯೊಳಗಾಗಿ ದಾವಾ ಪ್ರಕಾರಣ ದಾಖಾಲಿಸಬೇಕು. ಚುನಾವಣೆಗೆ ಸಂಬಂಧಪಟ್ಟಂತೆ ಚುನಾವಣೆ ನಡೆದ ದಿನಾಂಕದಿಂದ 30 ದಿವನದೊಳಗಾಗಿ ಪ್ರಕರಣ ದಾಖಾಲಿಸಬೇಕು. ಸೇವಾ ನಿಯಮಗಳಿಗೆ ಸಂಬಂಧಪಟ್ಟಂತೆ ನೌಕರರು / ಅಧಿಕಾರಿಗಳು ದಾವಾ ಪ್ರಕರಣ ಹೊಡಲು 12 ತಿಂಗಳ ಅವಧಿಯನ್ನು ನಿಗಧಿಪಡಿಸಿದೆ. ಈ ಅವಧಿಯೊಳಗೆ ಪ್ರಕರಣ ದಾಖಲಿಸಲು ಸಾಧ್ಯವಾಗದಿದ್ದರೆ ಸಾಕಾರಣಗಳೊಂದಿಗೆ ವಿಳಂಬ ವಿನಾಯಿತಿ ಅರ್ಜಿಯನ್ನು ದಾವಾ ಪ್ರಕರಣ ದಾಖಲು ಮಾಡುವ ಸಂದರ್ಭದಲ್ಲಿ ಅದೇ ಪ್ರಾಧಿಕಾರದ ಮುಂದೆ ಅರ್ಜಿ ಸಲ್ಲಿಸಿದ ನಂತರ ಹಾಗೂ ವಿಳಂಬ ವಿನಾಯಿತಿ ಪಡೆದ ನಂತರ ದಾವಾ ಪ್ರಕರಣ ದಾಖಾಲಿಸಬಹುದಾಗಿದೆ.

**13. ಸದಸ್ಯರ ಉಳಿತಾಯ ಖಾತೆಯ ಹಿಂಪಡೆತದ ಮಿತಿ ಎಷ್ಟು?**

ಸದಸ್ಯರ ಉಳಿತಾಯ ಖಾತೆಯಿಂದ ಹಿಂಪಡೆಯುವ ಮಿತಿ ಎಷ್ಟು ವೆಂಬುದರ ಬಗ್ಗೆ, ನಿಮ್ಮ ಉಪವಿಧಿಗಳಲ್ಲಿ ನಿಯಮ ರೂಪಿಸಬೇಕು. ಆದರೆ ಭಾರತೀಯ ರಿಸರ್ವ್ ಬ್ಯಾಂಕಿನ ನೀತಿಯಂತೆ ಉಳಿತಾಯ ಖಾತೆ ತೆರೆಯಲು ಸಹಕಾರಿಗಳಗೆ ಅವಕಾಶವಿಲ್ಲ. ಇತ್ತೀಚಿಗೆ ಭಾರತೀಯ ರಿಸರ್ವ್ ಬ್ಯಾಂಕ್ ನವರು ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿಗೆ ಉಳಿತಾಯ ಖಾತೆಯಿಂದ ರೂ. 50,000 ಸಾವಿರಕ್ಕಿಂತ ಹೆಚ್ಚು ಮೊತ್ತದ ಹಣ ಹಿಂಪಡೆಯಲು ಬಯಸಿದರೆ, ಅದಕ್ಕೆ ಲಿಖಿತವಾಗಿ ಸಂಬಂಧಪಟ್ಟ ಬ್ಯಾಂಕಿಗೆ ಮೊದಲೇ ತಿಳಿಸಬೇಕೆಂಬ ನೀತಿಯನ್ನು ಜಾರಿಮಾಡಿದೆ.

ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು.....

## ಉದ್ಘಾಟನೆ ಕಾರ್ಯಕ್ರಮ



**ಉಡುಪಿ :** ಶ್ರೀ ರಾಮಾಂಜನೇಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ. ಹಾಗೂ ಇತರ ಸ್ಥಳೀಯ ಸಂಘ ಸಂಸ್ಥೆಗಳ ಸಹಭಾಗಿತ್ವದಲ್ಲಿ ರಕ್ತದಾನ ಶಿಬಿರದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿ ನಿರ್ದೇಶಕರಾದ ಮಂಜುನಾಥ್ ಎಸ್.ಕೆ ರವರು ನೇರವೇರಿಸಿದರು.



**ಉಡುಪಿ :** ದಿನಾಂಕ 04.08.2021 ರಂದು ಉಡುಪಿ ಜಿಲ್ಲೆಯ ಸಾಂಚಿ ಸೌಹಾರ್ದ ಸಹಕಾರಿ ಇದರ ಅಂಗಸಂಸ್ಥೆಯಾದ ಸಾಂಚಿ ಆಯುರ್ವೇದ ಕೇಂದ್ರದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್. ಕೆ ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ ಸದಾಶಿವ ಶೆಟ್ಟಿ ಇವರು ನೇರವೇರಿಸಿದರು.

# ಕೊರೋನಾ ಲಾಕ್‌ಡೌನ್ ಹಿನ್ನಲೆಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಸಹಾಯ ಹಸ್ತ

## ಅರಿಹಂತ ಸೌಹಾರ್ದ ಸಹಕಾರಿಯಿಂದ 1600ಕ್ಕೂ ಅಧಿಕ ದಿನಸಿ ಕಿಟ್ ವಿತರಣೆ



**ಬೋರಗಾಂವ :** ಅರಿಹಂತ ಉದ್ಯೋಗ ಸಮೂಹದಿಂದ ಕಳೆದ ಎರಡು ವರ್ಷಗಳಲ್ಲಿ ದೇಶದಲ್ಲಿ ಕಾಲಿಟ್ಟ ಕೊರೋನಾ ಮಹಾಮಾರಿ ಹತ್ತಿಕ್ಕಲು ಸಾಮಾಜಿಕ ಬಾಂಧವ್ಯ ಕಾಯ್ದುಕೊಂಡು ರೂ. 30 ಲಕ್ಷಕ್ಕೂ ಅಧಿಕ ಆರ್ಥಿಕ ಸಹಾಯ ಮಾಡಿ ಉತ್ತರ ಕರ್ನಾಟಕದ ಸಹಕಾರಿಗಳಿಗೆ ಮಾದರಿಯಾಗಿದ್ದು "ಸಹಕಾರಿಗಳು ಕೇವಲ ಆರ್ಥಿಕ ಸಮೃದ್ಧಿಗೆಷ್ಟೆ ಸೀಮಿತವಾಗಿರದೆ ಮಾನವೀಯ ಮೌಲ್ಯಗಳನ್ನು ಮೆರೆದು ಜನರ ಹೃದಯ ತಟ್ಟಿದೆ.

ಪ್ರಸಕ್ತ ವರ್ಷ ಅರಿಹಂತ ಉದ್ಯೋಗ ಸಮೂಹದಿಂದ ನಿಪ್ಪಾಣಿ ತಾಲ್ಲೂಕಿನ ಪ್ರತಿ ಹಳ್ಳಿಗಳಲ್ಲಿಯ ಮಹಾಮಾರಿ ಕೊರೊನಾ ತಡೆಗಟ್ಟಲು ಅವಿರತ ಶ್ರಮ ವಹಿಸುತ್ತಿರುವ ಆರೋಗ್ಯ ವಿಭಾಗದ ಸಿಬ್ಬಂದಿಗಳು, ಆಶಾ ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮ ಪಂಚಾಯತಿಯ ಸ್ವಚ್ಛತಾ ಕಾರ್ಮಿಕರ, ಪೋಲೀಸ್ ಇಲಾಖೆ ಸಿಬ್ಬಂದಿ ಹಾಗೂ ಸಮೂಹ ಮಾಧ್ಯಮಗಳಾದ ಪ್ರಿಂಟ್ ಹಾಗೂ ಇಲೆಕ್ಟ್ರಾನಿಕ್ ಸೇರಿದಂತೆ 60 ಹಳ್ಳಿಗಳಲ್ಲಿಯ 1600ಕ್ಕೂ ಅಧಿಕ ವಾರಿಯರ್ಸ್‌ಗಳಿಗೆ ದಿನಸಿ ಕಿಟ್ ವಿತರಿಸಲಾಯಿತು ಹಾಗೂ ಉಚಿತ ಅಂಬ್ಯುಲೆನ್ಸ್ ಸೇವೆ, 4 ಅತ್ಯಾಧುನಿಕ ಆಕ್ಸಿಜನ್ ಕನಸಂಟ್ರೇಟ ಯಂತ್ರಗಳನ್ನು, 5000 ಸ್ಟೀಮರ್, 5000 ಸ್ಯಾನಿಟೈಸರ್, 15000 ಮಾಸ್ಕ್ ವಿತರಿಸಲಾಯಿತು.

## ಮಹಾವೀರ ವಿವಿಧ ಉದ್ದೇಶ ಸಹಕಾರಿಯಿಂದ ದಿನಸಿ ಕಿಟ್ ವಿತರಣೆ



**ಬೆಳಗಾವಿ :** ಮಹಾವೀರ ಉದ್ಯೋಗ ಸಮೂಹ ಸಂಸ್ಥೆಯ ಮತ್ತು ಮಹಾವೀರ ವಿವಿಧ ಉದ್ದೇಶ ಸೌಹಾರ್ದ ಸಹಕಾರಿ ನಿ., ಹುಕ್ಕೇರಿ ವತಿಯಿಂದ ಕೋವಿಡ್–19 ಮಹಾಮಾರಿಯ ಸಂದರ್ಭದಲ್ಲಿ ದಿನಸಿ ಸಾಮಗ್ರಿಗಳ ಕಿಟ್ ವಿತರಣಾ ಸಮಾರಂಭ ಕಾರ್ಯಕ್ರಮದಲ್ಲಿ ಹುಕ್ಕೇರಿ ಮಠದ ಶ್ರೀ ಷ ಬ್ರ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು. ಶ್ರೀ ಅಭಿನವ ಮಂಜುನಾಥ ಸ್ವಾಮಿಗಳು ಹಾಗೂ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ಮತ್ತು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಮಹಾವೀರ ನಿಲಜಗಿ ರವರು ಉಪಸ್ಥಿತರಿದ್ದರು.

## ಮಿರಾಕಲ್ಸ್ ಆಫ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ 462 ಜನರಿಗೆ ಆಹಾರ ವಿತರಣೆ




**ಮಂಗಳೂರು :** ಮಿರಾಕಲ್ಸ್ ಆಫ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ನಿ. ಮಂಗಳೂರು (ಪ್ರಥಮ ಶಾಖೆ) ಇದರ ಪ್ರಥಮ ವಾರ್ಷಿಕೋತ್ಸವದ ಪ್ರಯುಕ್ತ ಎಂ. ಫ್ರೆಂಡ್ಸ್ ಚಾರಿಟೇಬಲ್ ಟ್ರಸ್ಟ್ (ರಿ.) ಮಂಗಳೂರು ಪ್ರಯುಕ್ತ ಆಯೋಜಿಸಲಾದ ವೆನ್ಲಾಕ್ ಹಾಗೂ ಲೇಡಿಗೋಶನ್ ಜಿಲ್ಲಾಸ್ಪತ್ರೆಯ ರೋಗಿಗಳ ಸಹವರ್ತಿಗಳಿಗೆ ಪ್ರತಿದಿನ ರಾತ್ರಿಯ ಉಚಿತ ಭೋಜನ ವ್ಯವಸ್ಥೆಯನ್ನು ಒಟ್ಟು 462 ಮಂದಿಗೆ ಆಹಾರ ವಿತರಿಸಲಾಯಿತು.



**ಮಂಡ್ಯ :** ದಿನಾಂಕ 05.07.2021 ರಂದು ನಾಗಮಂಗಲ ತಾಲ್ಲೂಕು ಶಿಕ್ಷಣ ಇಲಾಖಾ ಪದವಿ ಶಿಕ್ಷಕರ ಸೌಹಾರ್ದ ಸಹಕಾರಿ ನಿ., ನಾಗಮಂಗಲ ಇದರ ಕಛೇರಿಯಲ್ಲಿ ನೂತನವಾಗಿ ಇ–ಸ್ಟಾಂಪಿಂಗ್ ಕೇಂದ್ರವನ್ನು ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀ ಎಸ್. ಶಿವಸ್ವಾಮಿ, ಉಪಾಧ್ಯಕ್ಷರು, ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಭಾರತದಲ್ಲಿ ಸಾಸ್ಥಿಕ ಹಣಕಾಸು - ಸಮಸ್ಯೆಗಳು - ಮುಂದಿನ ದಾರಿ

ಲೇಖಕರು – ಡಾ॥ ಶ್ವೇತಾ ಕೋಹಲಿ (ಮೂಲ) ಕನ್ನಡ ಅನುವಾದ – ಮಾಧುರಿ ದೇಶಪಾಂಡೆ

ಭಾರತದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಮಾರುಕಟ್ಟೆಯಲ್ಲಿ ಸಾಲವನ್ನು ಸಾಮಾನ್ಯ ಮತ್ತು ಅಸಾಮಾನ್ಯ ಎರಡೂ ರೀತಿಯಲ್ಲಿ ನಂಬಿಕೆಯ ಆಧಾರದ ಮೇಲೆ ತೆಗೆದುಕೊಳ್ಳಲಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿ ಕೃಷಿ ಕ್ಷೇತ್ರದಲ್ಲಿ ಹಣದ ಅವಶ್ಯಕತೆ ಹೆಚ್ಚುತ್ತಿದ್ದಂತೆ ಕ್ರಮಬದ್ಧವಾಗಿ ಹಣದ ಹರಿವನ್ನು ಹೆಚ್ಚಿಸಲು, ಪ್ರಮುಖವಾಗಿ ರೈತರನ್ನು ಲೇವಾದೇವಿಯವರ ಹಿಡಿತದಿಂದ ಬಿಡಿಸುವ ಸಲುವಾಗಿ ಮತ್ತು ಸಾಲದ ಭಾರವನ್ನು ಕಡಿಮೆ ಮಾಡುವ ಸಲುವಾಗಿ ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಸಾಲವನ್ನು ನೀಡಿ, ಹೂಡಿಕೆಯನ್ನು ಮಾಡಿ ಇಳುವರಿಯನ್ನು ಪಡೆಯುವ ಪ್ರಯತ್ನ ನಡೆಯುತ್ತಿದೆ.

ಐತಿಹಾಸಿಕವಾಗಿ, ಭಾರತ ದೇಶದಲ್ಲಿ ಗ್ರಾಮೀಣ ಬ್ಯಾಂಕಿಗ್ ಕ್ಷೇತ್ರವನ್ನು ಬಲಪಡಿಸಲು ಅನೇಕ ಕ್ರಮಗಳನ್ನು ಸಾರ್ವಜನಿಕವಾಗಿ ಸಂಬಂಧಿಸಿದ ಅಧಿಕಾರಿಗಳು ಕೈಗೊಂಡಿದ್ದಾರೆ. ಭಾರತದ ಸಹಕಾರ ಚಟುವಳಿಯು ಕೃಷಿ ಮತ್ತು ಅದಕ್ಕೆ ಸಂಬಂಧಿತ ಕ್ಷೇತ್ರಗಳಲ್ಲಿ ಸಹಾಯಕವಾಗಿ ನಿಲ್ಲಲು ಬದ್ಧವಾಗಿದೆ. ದುಬಾರಿ ಬಡ್ಡಿ ಸಾಲವು ವಸಾಹತು ಕಾಲದಿಂದಲೇ ಬಹಳಷ್ಟು ಪ್ರಮಾಣದಲ್ಲಿ ನಡೆಯುತ್ತಿರುವುದು ದಾಖಲಾಗಿದೆ. ಕ್ರಿ.ಶ 1800ರ ನಂತದಲ್ಲಿ ಸಾಹುಕಾರರು ತಾವು ನೀಡುವ ಬಡ್ಡಿಯ ವ್ಯಾಪಾರದಲ್ಲಿ ರೈತರನ್ನು ಹಿಂಸೆ ನೀಡಿ ಅವರಿಂದ ಅವರ ಜಮೀನನ್ನು ವಶಪಡಿಸಿ ಕೊಳ್ಳುತ್ತಿದ್ದರು. ಕ್ರಿ.ಶ 1875ರ ಹೊತ್ತಿಗೆ ಮಹಾರಾಷ್ಟ್ರದ ಪೂನಾ ಸಮೀಪ ರೈತರು ಸಾಹುಕಾರರನ್ನು ತಮ್ಮ ಹಳ್ಳಿಯಿಂದಲೇ ಹೊರಹಾಕಿದರು ಹೀಗಾಗಿ ನಂತರದಲ್ಲಿ ಡೆಕ್ಕನ್ ರಾಯ್ಟ್ ಕಮೀಷನ್ (ಕ್ರಿ.ಶ1876) ಗ್ರಾಮೀಣ ಭಾರತದಲ್ಲಿ ನಡೆಯುತ್ತಿರುವ ಇಂತಹ ಘಟನೆಗಳನ್ನು ತಡೆಯಲು ಮತ್ತು ಋಣಭಾರದಿಂದ ಹೊರ ಬರಲು ಎರಡು ಮಾರ್ಗಗಳನ್ನು ಗುರುತಿಸಿತು. ಈ ಕಾರಣದಿಂದ ಮುಂದೆ ನೀತಿಗಳನ್ನು ರೂಪಿಸಲಾಯಿತು. ಈ ಎಲ್ಲ ಕಾರ್ಯ ಸೂಚಿಗಳು ಭವಿಷ್ಯದ ಮಧ್ಯಸ್ಥಿಕೆಯ ಹೊಸ ನೀತಿಯನ್ನು ರೂಪಿಸಿ ಸಾಹುಕಾರರನ್ನು ನಿಯಂತ್ರಿಸಿ ಮತ್ತು ಅವರ ಜೊತೆಗೆ ಪೈಪೋಟಿ ನಡೆಸಿ ಗ್ರಾಮೀಣ ಪ್ರದೇಶದಲ್ಲಿ ರೈತಾಪಿ ಮತ್ತು ಇತರ ವೃತ್ತಿಯ ಜನರಿಗೆ ಧನ ಸಹಾಯ ಮಾಡುವ ಸಂಸ್ಥೆಯನ್ನು ಆರಂಭ ಮಾಡಲು ಇತರೇ ವ್ಯವಸ್ಥೆ ಮಾಡುವ ಪ್ರಯತ್ನವಾಗಿತ್ತು. ಈ ವಿಷಯದಲ್ಲಿ ಬ್ರಿಟಿಷ ಆಡಳಿತಗಾರರಿಂದ ಮೊದಲಿಗೆ ಕೈ ಗೊಳ್ಳಲಾದ ಕ್ರಮವೆಂದರೆ ತಕ್ಕವೀ ಸಾಲ, ಕ್ರಿ.ಶ 1883ರ ಭೂ ಸುಧಾರಣಾ ಸಾಲದ ಕಾನೂನಿನ ಅಡಿಯಲ್ಲಿ ಹೆಚ್ಚು ಸಮಯದ ಸಾಲಗಳನ್ನು ಮತ್ತು ಕ್ರಿ.ಶ 1884ರ ಕೃಷಿ ಸಾಲದ ನೀತಿಯ ಅಡಿಯಲ್ಲಿ ಕಡಿಮೆ ಸಮಯದ ಮತ್ತು ಮಧ್ಯಮ ಅವಧಿಯ ಸಾಲಗಳನ್ನು ಕೊಡಲಾರಂಭಿಸಿದರು.

19ನೇ ಶತಮಾನದ ಕೊನೆಯ ಭಾಗದಲ್ಲಿ, ಗ್ರಾಮೀಣ ಋಣ ಭಾರ ಮತ್ತು ರೈತರ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಚಿಟ್ ಫಂಡ್‌ಗಳು ಮತ್ತು ಕೋ–ಆಪರೇಟಿವ್ ಸೊಸೈಟಿಗಳನ್ನು ಆರಂಭಿಸುವ ಯೋಚನೆಯನ್ನು ಮಾಡಿದರು. ಸಾಮಾನ್ಯ ರೈತರಿಗೆ ಈ ಸಹಕಾರಿ ಚಳುವಳಿ ಅವರಲ್ಲಿ ಇರುವ ಸಂಪನ್ಮೂಲಗಳನ್ನು ಬಳಸಿಕೊಂಡು ಸಾಲವನ್ನು ಪಡೆದು ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಸಾಲ, ಬೇಡಿಕೆಯನ್ನು ಪೂರೈಸುವಿಕೆ ಮತ್ತು ಬೆಳೆದ ಸಾಮಗ್ರಿಗಳ ಮಾರುಕಟ್ಟೆ ಇವುಗಳಿಗೆ ಸಹಕಾರಿ ಚಳುವಳಿಗಳು ಉಪಯೋಗಕಾರಿಯೆನಿಸಿತು, ನಂತರ ಸಮಗ್ರ ನ್ಯಾಯಾಂಗವು ಇದನ್ನು ಸಹಕಾರಿ ಸಂಸ್ಥೆಗಳ ನಿಯಮಾವಳಿ 1904 ( ಕೋ ಆಪರೇಟವ್ ಸೋಸೈಟಿ ಆಕ್ಟ್) ಎಂದು ಕರೆಯಲಾಯಿತು. ಈ ನಿಯಮಾವಳಿಯ ಅಡಿಯಲ್ಲಿ ಸಹಕಾರಿ ಸಂಸ್ಥೆಗಳ ರೆಜಿಸ್ಟ್ರಾರ್ ಹುದ್ದೆಯನ್ನು ಮತ್ತು ಸೋಸೈಟಿಗಳ ನೊಂದಾವಣೆಯನ್ನು ಮಾಡಿ ಅನೇಕ ಬೇರೆ ಕೆಲಸಗಳನ್ನು ಮತ್ತು ಲೆಕ್ಕ ಪರಿಶೋಧನೆ ಮಾಡಲು ಯೋಜಿಸಲಾಯಿತು. ಮಾಂಟೆಗೋ ಚೆಲ್ಸ್ ಫಾರ್ಮಸ್ ರಿಫಾರ್ಮಸ್ ಕ್ರಿ.ಶ 1919ರಲ್ಲಿ ಸಹಕಾರ ಚಳುವಳಿಯು ಪ್ರಾಂತೀಯ ವಿಷಯವಾಗಿ ಪರಿಗಣಿಸಲಾಯಿತು. ಮತ್ತು ಪ್ರತಿ ಪ್ರಾಂತಕ್ಕೂ ತಮ್ಮದೇ ಆದ ಸಹಕಾರಿ ನಿಯಮಾವಳಿಗಳನ್ನು ರೂಪಿಸುವ ಅಧಿಕಾರವನ್ನು ನೀಡಲಾಯಿತು.

ಭಾರತ ಸರಕಾರದ ನೀತಿ ಕ್ರಿ.ಶ 1935ರ ಅನ್ವಯ ಸಹಕಾರಿ ಚಳುವಳಿಯನ್ನು ಪ್ರಾಂತೀಯ ವಿಷಯವೆಂದು ಪರಿಗಣಿಸಲಾಯಿತು. ಕೋ–ಆಪರೇಟಿವ್ ಸೋಸೈಟಿಗಳು ರಾಜ್ಯದ ವಿಷಯವಾಗಿ ಭಾರತೀಯ ಸಂವಿಧಾನದ ರಾಜ್ಯ ಪಟ್ಟಿಯ 32ನೇ ಸಂಖ್ಯೆಯ ಡಿಯಲ್ಲಿ ಸೇರಿಸಲಾಯಿತು. ಇದು ಔಪಚಾರಿಕವಾಗಿ ಆರಂಭಿಸಿದ ಮೊದಲ ಸಂಸ್ಥೆಯಗಿದದ್ದು ಅದರ ಉದೇಶ ಬಡ ರೈತರನ್ನು ಸಾಹುಕಾರರ ಕಪಿ ಮುಷ್ಠಿಯ ಹಿಡಿತದಿಂದ ಬಿಡಿಸುವದೇ ಈ ಚಳುವಳಿಯ ಉದ್ದೇಶವಾಗಿತತು. ನಂತರದಲ್ಲಿ ರಾಜ್ಯ ಅಭಿವೃದ್ಧಿ ಬ್ಯಾಂಕುಗಳ ಮತ್ತು ಭೂ ಅಭಿವೃದ್ಧಿ ಬ್ಯಾಂಕುಗಳ ಸ್ಥಾಪನೆಗೆ ಕಾರಣವಾಯಿತು. ಕ್ರಿ.ಶ 1935ರಲ್ಲಿ ಆರ್‌ಬಿಐನಲ್ಲಿ ಕೃಷಿ ಸಾಲ ವಿಭಾಗವನ್ನು ಸ್ಥಾಪಿಸಿ, ಕೃಷಿಗೆ ಸಂಬಂಧಿಸಿದ ಸಾಲವನ್ನು ನೀಡುವಲ್ಲಿ ಆರ್‌ಬಿಐದ ಪ್ರಾಮುಖ್ಯತೆಯನ್ನು ಗುರುತಿಸುವಂತೆ ಮಾಡಲಾಯಿತು.

ರೈತರ ಸಹಾಯಕ್ಕಾಗಿ ಆರಂಭಿಸಿದ ನೀತಿಗಳನ್ನು ಜಾರಿಗೆ ತರಲು ಮತ್ತು ರೈತರ ಹಿತಾಸಕ್ತಿಯನ್ನು ಕಾಪಡಲು ಮತ್ತು ಸಾಲವನ್ನು ಕೊಡುವ ಸಂಸ್ಥೆಯು ಮೊದಲಿಗೆ ದಶವಾರ್ಷಿಕ ಸಮಯದ ದೇಶದಾದ್ಯಂತ ಮನೆಯ ಜನರ ಋಣ ಭಾರದ ವರದಿಯನ್ನು ನೋಡುತಾರೆ. ಅಖಿಲ ಭಾರತ ಋಣಭಾರ ಸಮೀಕ್ಷೆ (ಏಐಆರ್‌ಸಿಎಸ್)ಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ವತಿಯಿಂದ ಕ್ರಿ.ಶ 1951–52 ನಡೆಸಲಾಯಿತು. ಪ್ರಮುಖ ಉದ್ದೇಶವು ರೈತರ ಮತ್ತು ಕೃಷಿಯ ಅಭಿವೃದ್ಧಿಯ ಸಲುವಾಗಿ ಸಾಲದ ನೀತಿಗಳನ್ನು ರೂಪಿಸುವುದಾಗಿತ್ತು. ಆದುದರಿಂದ ಸ್ವತಂತ್ರ್ಯ ದೊರೆತ ನಂತರ ಭಾರತ ಸರಕಾರವು ಅಖಿಲ ಭಾರತೀಯ ಋಣಭಾರ ಸಮೀಕ್ಷಾ ಸಮಿತಿ (ಏಐಆರ್‌ಸಿಎಸ್) 1951ರಲ್ಲಿ

ನಿಯೋಜಿಸಿದ್ದರು ಕ್ರಿ.ಶ 1954ರಲ್ಲಿ ಅದರ ವರದಿಯು ದೊರೆಯಿತು. ಸಮಿತಿಯು ಗಮನಿಸಿದ ವಿಷಯವೆಂದರೆ ಸಮಾಜದ ಬಹು ದೊಡ್ಡ ಪ್ರಮಾಣದ ಜನರಿಗೆ ಸಹಕಾರಿ ಕ್ಷೇತ್ರದ ಸೌಲಭ್ಯಗಳು ತಲುಪೇ ಇಲ್ಲವೆಂದು ಮತ್ತು ಯಾವ ಪ್ರದೇಶಗಳಲ್ಲಿ ಸಹಕಾರ ಕ್ಷೇತ್ರದ ತಿಳುವಳಿಕೆಯನ್ನು ನೀಡಲಾಗಿದೆಯೋ ಅಲ್ಲಿ ಹೆಚ್ಚು ಸಂಖ್ಯೆಯ ರೈತಾಪಿ ಜನರು ಸದಸ್ಯತ್ವವನ್ನು ಪಡೆದೇ ಇಲ್ಲ. ಹೀಗೆ ಮುಂದೆ ವರದಿಯಲ್ಲಿ ಯಾವ ಪ್ರದೇಶದಲ್ಲಿ ಸದಸ್ಯತ್ವವನ್ನು ಪಡೆಯಲಾಗಿದೆಯೋ ಅಲ್ಲಿಯೂ ಕೂಡ ಸಾಲ ಸೌಲಭ್ಯಗಳನ್ನು ಸಹಕಾರಿ ಕ್ಷೇತ್ರದ ಬದಲು ಅನೌಪಚಾರಿಕ ಮೂಲಗಳಿಂದ ಪಡೆಯಲಾಗುತ್ತದೆ. ಆದ್ದರಿಂದಲೇ ಒಂದು ನಿರ್ಣಯಕ್ಕೆ ಬರಲಾಯಿತು, ಕೃಷಿ ಸಾಲವು ಸರಿಯಾದ ಪ್ರಮಾಣದಲ್ಲಿ ತೆಗೆದುಕೊಳುತ್ತಿಲ್ಲ, ತೆಗೆದುಕೊಳ್ಳುತ್ತಿದ್ದ ಸಾಲಗಳು ಸರಿಯಾದ ವಿಧಾನದ್ದವಾಗಿರಲಿಲ್ಲ, ಸಾಲದ ಕಾರಣಗಳೂ ಸರಿಯಾಗಿರಲಿಲ್ಲ ಹಾಗೂ ಅವ್ಯಕತೆ ಇರುವ ಜನರಿಗೆ ಈ ಸಾಲ ಸೌಲಭ್ಯವು ತಲುಪುತ್ತಿರಲಿಲ್ಲ. ಇಂತಹ ಪರಿಸ್ಥೀತಿಯನ್ನು ಗಮನಿಸಿದ ಸಮಿತಿಯು ಕ್ರಿ.ಶ 1955ರಲ್ಲಿ ಎಸ್‌ಬಿಐಯನ್ನು ಸ್ಥಾಪಿಸಿ, ಗ್ರಾಮೀಣ ಮತ್ತು ಸ್ನ ಶಹರಗಳಲ್ಲಿ ತಮ್ಮ 400 ಶಾಖೆಗಳನ್ನು ಆರಂಭಿಸಿವ ಗುರಿಯೊಂದಿಗೆ ಆರಂಭಿಸಲಾಯಿತು. ಮತ್ತು ಕೃಷಿ ಸಾಲಗಳನ್ನು ನೀಡ ತೊಡಗಿದರು. ಹೀಗೆ ಎಸ್‌ಬಿಐ ಆರಂಭದೊಂದಿಗೆ ಹೊಸದೊಂದು ಅಲೆಯು ಆರಂಭವಾಯಿತು, ವಾಣಿಜ್ಯ ಕ್ಷೇತ್ರದೊಂಧಿಗೆ ಕೃಷಿ ಕ್ಷೇತ್ರದ ಸಾಲಗಳನ್ನು ಕೊಡಲು ಆರಂಭಿಸಿದರು ಇದರಂತೆಯೇ ಸಹಕಾರಿ ಕ್ಷೇತ್ರದಲ್ಲಿಯೂ ಬೆಳವಣಿಗೆಯಾಯಿತು. ಆದ್ದರಿಂದ ಸಮಿತಿಯ ಶಿಫಾರಸ್ಸಿನಂತೆ "ಸಹಕಾರಿ ಸಂಘಗಳು ಸೋತಿದ್ದರೂ ಸಹಕಾರವು ಗೆಲ್ಲಬೇಕು" ಎಂದು ಹೇಳಿತು. ಆ ಹಂತದಲ್ಲಿ ಸಹಕಾರಿ ಕ್ಷೇತ್ರದ ಬೆಳವಣಿಗೆಯನ್ನು ಸೀಮಿತಗೊಳಿಸಿ ವಾಣಿಜ್ಯ ಬ್ಯಾಂಕುಗಳು ಸಾಲದ ಕ್ಷೇತ್ರದಲ್ಲಿ ಸಹಕಾರಿಗಳ ಸ್ಥಾನವನ್ನು ತೆಗೆದುಕೊಂಡವು. ಎರಡನೇ ದಶವಾರ್ಷಿಕ ಸಮೀಕ್ಷೆಯಲ್ಲಿ (ಎಐಆರ್‌ಡಿಐ–ಎಸ್) ಅಖಿಲ ಭಾರತ ಗ್ರಾಮೀಣ ಋಣ ಮತ್ತು ಹೂಡಿಕೆಯ ಸಮೀಕ್ಷೆ ಕ್ರಿ.ಶ 1961–62ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ವತಿಯಿಂದ ನಡೆಸಲಾಯಿತು. ಈ ಸಮೀಕ್ಷೆಯ ಮೂಲ ಕಾರಣ ಅಂಕಿ ಅಂಶಗಳ ಮೂಲಕ ಸರಿಯಾದ ಮತ್ತು ಸೂಕ್ತವಾದ ಸಾಲವು ಎಷ್ಟು ಜನರಿಗೆ ಬೇಕು, ಹೂಡಿಕೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ಮನೆಗೆಲಸಗಳು ವಿಷಯಗಳ ಅಧ್ಯಯನ ಸಂಪೂರ್ಣ ದೇಶದ ಮತ್ತು ರಾಜ್ಯಗಳ ಪ್ರತ್ಯೇಕವಾಗಿ ಮಾಹಿತಿಯನ್ನು ಸಂಗ್ರಹಿಸುವುದಾಗಿತ್ತು. ಇದು ಗಣನೀಯವಾದ ಮಹತ್ವದ ಮಾಹಿತಿಯನ್ನು ನೀಡಿತು.. ಕ್ರಿ.ಶ 1963ರಲ್ಲಿ ಆರ್‌ಬಿಐ ಯು ಅಗ್ರೀಕಲ್ಚರ್ ರಿಫೈನಾಯನ್ಸ್ ಕಾರ್ಪೋರೇಷನ ಅನ್ನು (ಎಆರ್‌ಸಿ) ಸ್ಥಾಪಿಸಿತು ಇದರ ಮುಖ್ಯ ಉದ್ದೇಶವು ಕೃಷಿ ಆಧಾರಿತ ಜನರಿಗೆ ಮತ್ತೆ ಹಣವನ್ನು ಒದಗಿಸುವುದಾಗಿತ್ತು ಆದರೆ ಈಗಲೂ ಸಹಕಾರಿ ಸಂಸ್ಥೆಗಳು ಸರಿಯಾದ ಪ್ರಮಾಣದಲ್ಲಿ ಕೆಲಸ ಮಾಡಲಾಗಲಿಲ್ಲ.

ಈ ರೀತಿಯ ಸಾಂಸ್ಥಿಕ ಹಣದ ವ್ಯವಹಾರವನ್ನು ಕೃಷಿ, ಸಾಮಾಜಿಕ ನಿಯಂತ್ರಮಣ ಮತ್ತು ನಂತರ ವಾಣಿಜ್ಯ ಬ್ಯಾಂಕುಗಳ ರಾಷ್ಟೀಕರಣವು ಕ್ರಿ.ಶ 1969ರಲ್ಲಿ (ಕ್ರಿ.ಶ 1980)ರಲ್ಲಿ ನಡೆಸಲಾಯಿತು. ಪ್ರಮುಖ ಬ್ಯಾಂಕ್‌ಗಳ ರಾಷ್ಟೀಕರಣ ಶೀಘ್ರದಲ್ಲಿ ಆಯಿತು, ನಂತರ ಆರ್‌ಬಿಐಯು ಎರಡು ಪ್ರಮುಖ ಮೂಲಭೂತ ನೀತಿಗಳನ್ನು ರೂಪಿಸಿತು, ಈ ನೀತಿಗಳ ಪ್ರಮುಖ ಉದ್ದೇಶ ವಾಣಿಜ್ಯ ಬ್ಯಾಂಕುಗಳು ಮತ್ತು ಆರ್‌ಆರ್‌ಬಿಗಳನ್ನು ಕೃಷಿ ಸಾಲಗಳಲ್ಲಿ ತೊಡಗಿಸುವುದಾಗಿತ್ತು. ಕೃಷಿ ಕ್ಷೇತ್ರಕ್ಕೆ ಸಾಕಷ್ಟು ಪ್ರಮಾಣದ ಹಣದ ಹರಿವು ಮತ್ತು ಇತರೆ ಸಂಬಂಧಿತ ವಿಭಾಗಗಳಲ್ಲಿ, ಪ್ರಾಥಮಿಕ ಕ್ಷೇತ್ರಗಳಲ್ಲಿ ಸಾಲವನ್ನು ನೀಡುವ ಮಿತಿಯನ್ನು ವಾಣಿಜ್ಯ ಬ್ಯಾಂಕುಗಳಿಗೆ ಮತ್ತು ಆರ್‌ಆರ್‌ಬಿಗಳಿಗೆ ನಿರ್ಧರಿಸಲಾಯಿತು. ಬ್ಯಾಂಕುಗಳು ತಮ್ಮ ಬ್ಯಾಂಕಿನಲ್ಲಿರುವ ಠೇವಣಿಗಳ ಶೇಕಡಾ 40% ಮೊತ್ತವನ್ನು ಅವಶ್ಯಕತೆ ಇರುವ ಕ್ಷೇತ್ರದಲ್ಲಿ ಸಾಲದ ರೂಪದಲ್ಲಿ ನೀಡುವುದು ಅತ್ಯವಶ್ಯಕವಾಗಿತತು, ಅದರಲ್ಲಿ 18% ಶೇಕಡಾ ಸಾಲವನ್ನು ಕೃಷಿ ಕ್ಷೇತ್ರಕ್ಕೆ ಮೀಸಲಿಡಲಾಗಿತ್ತು (ನೇರ ಮತ್ತು ಪರೋಕ್ಷ ರೀತಿ) ಸಾಲಗಳನ್ನು ಕೊಡಲಾಗುತ್ತಿತ್ತು. ಮತ್ತೊಂದು ನೀತಿಯಲ್ಲಿ ಬ್ಯಾಂಕುಗಳ ಶಾಖೆಗಳನ್ನು ಹೆಚ್ಚಿಸುವ ಗುರಿಯನ್ನು ಹೊಂದಿದ್ದು ಗ್ರಾಮೀಣ ಮತ್ತು ಅರ್ಧ ನಗರೀಕರಣಗೊಂಡ ಸ್ಥಳಗಳಲ್ಲಿ, ಜೊತೆಗೆ ಅಭಿವೃದ್ಧಿಯಾಗದ ಮತ್ತು ಬ್ಯಾಂಕುಗಳಿರದ ರಾಜ್ಯ ಮತ್ತು ಪ್ರದೇಶಗಳಲ್ಲಿ ಬ್ಯಾಂಕುಗಳನ್ನು ಸ್ಥಾಪಿಸುವ ಉದ್ದೇಶವೇ ಮುಖ್ಯವಾಗಿತ್ತು. ಈ ನೀತಿಯ ಅನುಸರಿಸಿದ ಕ್ರಮಗಳ ಪರಿಣಾಮದಿಂದ ಗ್ರಾಮೀಣ ಪ್ರದೇಶದಲ್ಲಿ ನಿಸ್ಸಂದೇಹವಾಗಿ ಗಣನೀಯ ಪ್ರಮಣದಲ್ಲಿ ದೊಡ್ಡ ಪ್ರಮಣದದಲ್ಲಿ ಸಾಂಸ್ಥಿಕ ವಾಣಿಜ್ಯ ಸಂಸ್ಥೆ ಮತ್ತು ಎಲ್ಲ ಕ್ಷೇತ್ರಗಳಲ್ಲೂ ಕೃಷಿ ಕ್ಷೇತ್ರದಲ್ಲೂ ಶೀಘ್ರವಾದ ಅಭಿವೃದ್ಧಿಯನ್ನು ಸಾಧಿಸಿತು.

ಅಖಿಲ ಭಾರತೀಯ ಋಣಭಾರ ಮತ್ತು ಹೂಡಿಕೆ ಸಮೀಕ್ಷೆಯಲ್ಲಿ ಕ್ರಿ.ಶ 1961–62 ( ಕ್ರಿ.ಶ 1971–72, ಕ್ರಿ.ಶ 1981–82 ಮತ್ತು ಕ್ರಿ.ಶ 1991–92)ರಲ್ಲಿ ಸ್ಪಷ್ಟವಾಗಿ ತಿಳಿಸುವದೆನೆಂಧರೆ ಎಲ್ಲ ಸಾರ್ವಜನಿಕ ನೀತಿಗಳು ಪರಿಣಾಮವಾಗಿ ಕೃಷಿ ಸಾಲಗಳನ್ನು ಪಡೆಯುವ ವಿಧದಗಳಲ್ಲಿ ಅನೌಪಚಾರಿಕ ರೀತಿಯಲ್ಲಿ ಪಡೆಯುತ್ತಿದ್ದ ಸಾಲಗಳನ್ನು ಔಪಚಾರಿಕ ಸಾಲವನ್ನು ಪಡೆಯಲು ಆರಂಭಿಸಲಾಯಿತು ಇದರ ಮಾಹಿತಿಯನ್ನು ಪಟ್ಟಿ 1ರಲ್ಲಿ ನೀಡಲಾಗಿದೆ. ಮಾಹಿತಿಗಳ ಪ್ರಕಾರ ವಾಣಿಜ್ಯ ಬ್ಯಾಂಕುಗಳು ಸಹಕಾರಿ ಬ್ಯಾಂಕುಗಳ ಪ್ರಮಾಣದಲ್ಲಿ ಅತೀ ಶೀಘ್ರವಾಗಿ ಬೆಳೆದವು. (ಮೂಲ ಮಾಹಿತಿ ಎನ್ ಎಸ್ ಎಸ್ ಓ ವಿವಿಧ ಸುತ್ತುಗಳು)

| ಸಾಲ ಕೊಡುವ ಏಜೆನ್ಸಿಗಳ ಆಧಾರದ ಮೇಲೆ ಸಾಲವನ್ನು ಗ್ರಾಮೀಣ ಪ್ರದೇಶದ ಕೃಷಿಕರು ಪಡೆಯುತ್ತಿರುವ ಸಾಲದ ಪ್ರಮಾಣ (%) | | | | | | | |
|---|---|---|---|---|---|---|---|
| **ಸಾಲದ ಮೂಲ** | **1951** | **1961** | **1971** | **1981** | **1991** | **2003** | **2013** |
| ಸಂಸ್ಥೆಗಳಿಂದ ಪಡೆಯುವ ಸಾಲದ ಮೂಲಗಳು : | 7.3 | 14.8 | 29.2 | 61.3 | 64.0 | 57.1 | 56 |

| | | | | | | | |
|---|---|---|---|---|---|---|---|
| ಸರಕಾರಿ | 3.3 | 5.3 | 6.9 | 4.7 | 8.7 | 5.3 | 6.1 |
| ಸಹಕಾರಿ ಸೊಸೈಟಿಗಳು/ ಬ್ಯಾಂಕುಗಳು ಇತ್ಯದಿ | 3.1 | 9.1 | 20.1 | 28.6 | 21.6 | 27.3 | 24.8 |
| ವಾಣಿಜ್ಯ ಬ್ಯಾಂಕ್‌ಗಳು | 0.9 | 0.4 | 2.2 | 28.0 | 33.7 | 24.5 | 25.1 |
| ಸಾಂಸ್ಥಿಕವಲ್ಲದ ಸಾಲದ ಮೂಲಗಳು | 92.7 | 85.2 | 70.8 | 38.7 | 36.0 | 42.9 | 44 |
| ಲೇವಾದೇವಿ ವ್ಯವಹಾರ ಮಾಡುವವರು | 69.7 | 60.8 | 36.9 | 16.9 | 15.7 | 29.6 | 33.2 |
| ಸಂಬಂಧಿಕರು, ಗೆಳೆಯರು ಇತ್ಯಾದಿ | 14.2 | 6.9 | 13.8 | 9 | 6.7 | 7.1 | 8.5 |
| ವ್ಯಾಪಾರಿಗಳು ಮತ್ತು ವ್ಯಾಪಾರಿ ಏಜೆಂಟರು | 5.5 | 7.7 | 8.7 | 3.4 | 7.1 | 2.6 | 0.1 |
| ಸಾಹುಕಾರರು | 1.5 | 0.9 | 8.6 | 4 | 4 | 1 | 0.7 |
| ಇತರೆ | 1.9 | 8.9 | 2.8 | 4.9 | 2.5 | 2.6 | 1.6 |
| ಮೊತ್ತ | 100 | 100 | 100 | 100 | 100 | 100 | 100 |

**ಮೂಲ: ವಾಣಿಜ್ಯ ಮತ್ತು ಸಹಕಾರಿ ವಿಭಾಗ, ಭಾರತೀಯ ಕೃಷಿಯ ಪರಿಸ್ಥಿತಿ, 2017**

**ಸಾಂಸ್ಥಿಕ ಕೃಷಿ ಸಾಲಗಳ ಮೂಲ (%)**

| ವರ್ಷ | ಕೊ– ಆಪರೇಟಿವ್‌ಬ್ಯಾಂಕ್ | ಆರ್.ಆರ್.ಬಿ ಗಳು | ವಾಣಿಜ್ಯ ಬ್ಯಾಂಕ್ | ಇತರೆ ಏಜೆನ್ಸಿಗಳು |
|---|---|---|---|---|
| 2000–01 | 39.2 | 8.0 | 52.6 | 0.2 |
| 2010–11 | 15.7 | 9.8 | 74.5 | 0.0 |
| 2011–12 | 17.21 | 10.79 | 72 | 0.0 |
| 2012–13 | 18.0 | 10.5 | 71.5 | 0.0 |
| 2013–14 | 16.8 | 117.70 | 71.5 | 0.0 |
| 2014–15 | 17 | 12 | 71 | 0.0 |
| 2015–16 | 17 | 13 | 70 | 0.0 |

ಪಟ್ಟಿ 1ರಲ್ಲಿ ಸಂಸ್ಥಿಕ ಸಾಲವು ಕೃಷಿ ಕ್ಷೇತ್ರದಲ್ಲಿ ತೆಗೆದುಕೊಂಡ ಪ್ರಮಾಣವು 1951ರಲ್ಲಿ 7.3 ಇದ್ದು ಅದು 1991ರವರ ಹೊತ್ತಿಗೆ ಸರಿ ಸುಮಾರು 64% ಆಗಿದ್ದು ಅದೇಅಂಕಿ ಅಂಶಗಳು ಅನೌಪಚಾರಿಕ ಸಾಲ ಮೂಲಗಳ ಬಹಳಷ್ಟಾಗಿ ಇದ್ದಿದ್ದು 92.7% ಕ್ರಿ.ಶ 195ರಲ್ಲಿ ಇದ್ದರೆ ಅದು ಕಡಿಮೆಯಾಗುತ್ತಾ ಬಂದು ಕ್ರಿ.ಶ1991ರ ಸಮಯದಲ್ಲಿ 36% ಆಗಿದೆ ಇದು ಕೃಷಿ ಕ್ಷೇತ್ರದ ಸಾಲದ ಮಾಹಿತಿಯಾಗಿದೆ. ಸಾಂಸ್ಥಿಕ ಸಾಲದ ಪ್ರಮಣವನ್ನು ಗಮನಿಸುವುದಾದರೆ ಸಹಕಾರಿ ಸಂಸ್ಥೆಗಳ ಕೊಡುಗೆ 39.2% ರಿಂದ 17% ಇಳಿದಿದೆ. ಸಹಕಾರಿ ಸಾಲ ಕೊಡು ಸಂಸ್ಥೆಗಳು, ಕಡಿಮೆ ಮತ್ತು ಹೆಚ್ಚು ಅವಧಿಯ ಸಾಲಗಳನ್ನು ಕೃಷಿ ಕ್ಷೇತ್ರಕ್ಕೆ ನೀಡುವ ಸಂಸ್ಥೆಗಳು ದೇಶದ ಬಹುತೇಕ ಹಳ್ಳಿಗಳನ್ನು ವ್ಯಾಪಕವಾಗಿ ಒಳಗೊಂಡಿದೆ. ಭಾರತದಲ್ಲಿ 86.2ರಷ್ಟು (ಪಟ್ಟಿ3) ಕನಿಷ್ಠ ಮತ್ತು ಸಣ್ಣ ಪ್ರಮಾಣದ ರೈತರು ಬರುತ್ತಾರೆ. ಸಹಕಾರಿ ಸಂಸ್ಥೆಗಳ ಪಾಲು ಈಗಿರುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿರಬೇಕು ಏಕೆಂದರೆ ಇಂತಹ ಸಹಕಾರಿ ಸಂಸ್ಥೆಗಳಲ್ಲಿ ಸಾಲವನ್ನು ಸಣ್ಣ ಮತ್ತು ಅತಿ ಕಡಿಮೆ ಕೃಷಿ ಜಮೀನನ್ನು ಹೊಂದಿರುವ ರೈತರಿಗಾಗಿಯೇ ಇರುತ್ತದೆ. ಈ ಸಾಲಗಳಿಂದ ಋತುಮಾನಕ್ಕೆ ತಕ್ಕಂತಹ ಇಳುವರಿಯನ್ನು ಪಡೆಯಲು ಬಳಸುವ ಬಂಡವಾಳದ ರೂಪದಲ್ಲಿ ಸಾಲವನ್ನು ಪಡೆಯುತ್ತಾರೆ.

ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು.....

# ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ-16)

# PARTICIPATION OF COOPERATIVES IN ACHIEVING SUSTAINABLE DEVELOPMENT GOALS - SDGs (Part-16)



– ಶ್ರೀ ಯಶವಂತ ಡೋಂಗ್ರೆ

### ಎಸ್‌ಡಿಜಿ 16: ಶಾಂತಿ, ನ್ಯಾಯ ಮತ್ತು ಬಲಶಾಲಿ ಸಂಸ್ಥೆಗಳು

ಸುಸ್ಥಿರ ಅಭಿವೃದ್ಧಿಗಾಗಿ ಶಾಂತಿಯುತ ಮತ್ತು ಎಲ್ಲರನ್ನೊಳಗೊಂಡ ಸಮಾಜದ ನಿರ್ಮಾಣವನ್ನು ಉತ್ತೇಜಿಸಿರಿ, ಎಲ್ಲರಿಗೂ ನ್ಯಾಯ ದೊರೆಯುವಂತೆ ಮಾಡಿರಿ ಮತ್ತು ಎಲ್ಲ ಹಂತಗಳಲ್ಲೂ ಪರಿಣಾಮಕಾರಿಯಾದ, ಉತ್ತರದಾಯಿತ್ವ ಉಳ್ಳ ಮತ್ತು ಎಲ್ಲರನ್ನೂ ಒಳಗೊಂಡ ಸಂಸ್ಥೆಗಳನ್ನು ನಿರ್ಮಿಸಿರಿ ಎಂದು ಈ ಗುರಿಯಲ್ಲಿ ನಿರ್ದೇಶಿಸಲಾಗಿದೆ (Promote peaceful and inclusive societies for sustainable development, provide access to justice for all and build effective, accountable and inclusive institutions at all levels). ಖ್ಯಾತ ಆರ್ಥಿಕ ತಜ್ಞರಾದ ಅಮಾರ್ತ್ಯ ಸೇನ್‌ರವರು 'ಅಭಿವೃದ್ಧಿ ಎಂದರೆ ಶಾಂತಿ ಮತ್ತು ಅಭಿವೃದ್ಧಿ ಎಂದರೆ ಸ್ವಾತಂತ್ರ್ಯ' ಎಂದು ವ್ಯಾಖ್ಯಾನಿಸಿದ್ದಾರೆ. ಸುಸ್ಥಿರ ಅಭಿವೃದ್ಧಿಯ ಬಗೆಗಿನ ಹದಿನಾರನೆಯ ಗುರಿಯು ಇದೇ ಅಂಶಗಳ ಮೇಲೆ ಒತ್ತು ನೀಡಿದೆ. ಜಗತ್ತಿನಾದ್ಯಂತ ಒಂದೆಡೆ ಆಧುನೀಕರಣ, ತಂತ್ರಜ್ಞಾನದಲ್ಲಿ ಹೊಸ ಹೊಸ ಅನ್ವೇಶಣೆಗಳು, ಆರ್ಥಿಕ ಬೆಳವಣಿಗೆ ಇವೆಲ್ಲ ನಡೆಯುತ್ತಿದೆಯಾದರೂ, ಇನ್ನೊಂದೆಡೆ ರಾಜಕೀಯ ಮತ್ತು ಧಾರ್ಮಿಕ ನೆಲೆಯಲ್ಲಿ ಯುದ್ಧಗಳು ಮತ್ತು ಹಿಂಸೆ, ಅಸಮಾನತೆ, ಮಾನವ ಹಕ್ಕುಗಳ ಉಲ್ಲಂಘನೆ ಇವೆಲ್ಲ ಘಟಿಸುತ್ತಿರುವದನ್ನೂ ಕಾಣುತ್ತಿದ್ದೇವೆ. ಆದುದರಿಂದ ನಿಜವಾದ ಅಭಿವೃದ್ಧಿ ಸಾಧ್ಯವಾಗಬೇಕಾದರೆ ಶಾಂತಿ ನೆಲೆಸಬೇಕು, ಎಲ್ಲರಿಗೂ ನ್ಯಾಯ ಸಿಗಬೇಕು ಮತ್ತು ಸಮಾಜಗಳು ಎಲ್ಲರನ್ನೂ ಒಳಗೊಂಡ ಸಮೂಹವಾಗಬೇಕೆಂದು ಸುಸ್ಥಿರ ಅಭಿವೃದ್ಧಿಯ ಗುರಿಯಲ್ಲಿ ತಿಳಿಸಲಾಗಿದೆ.

ಹಿಂಸೆ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯ ವಿವಿಧ ಕಾರಣಗಳ ಆಧಾರದಲ್ಲಿ ಸುಸ್ಥಿರ ಅಭಿವೃದ್ಧಿಯ ಈ ಗುರಿಯು 2030ರೊಳಗೆ ಸಾದಿಸಬೇಕಾದ ಕೆಲವು ಮುಖ್ಯ ಮೈಲಿಗಲ್ಲುಗಳನ್ನು ಈ ಕೆಳಗಿನಂತೆ ಹೆಸರಿಸಿದೆ.

1. ಎಲ್ಲ ಬಗೆಯ ಹಿಂಸೆ ಮತ್ತು ಅದರಿಂದಾಗುವ ಸಾವಿನ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸಬೇಕು.
2. ಮಕ್ಕಳ ಬಗೆಗಿನ ದುರ್ನಡತೆ, ಶೋಷಣೆ, ಮಕ್ಕಳ ಕಾನೂನು ಬಾಹಿರ ಕಳ್ಳಸಾಗಣೆ ಮುಂತಾದುವುಗಳೂ ಸೇರಿದಂತೆ ಮಕ್ಕಳ ಮೇಲಿನ ಎಲ್ಲ ರೀತಿಯ ಹಿಂಸೆ ಮತ್ತು ದೌರ್ಜನ್ಯವನ್ನು ಕೊನೆಗೊಳಿಸಬೇಕು
3. ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಎಲ್ಲರಿಗೂ ಸಮಾನವಾಗಿ ನ್ಯಾಯ ಪ್ರಕ್ರಿಯೆ ದೊರೆಯುವಂತೆ ಎಲ್ಲೆಡೆ ಕಾನೂನಾತ್ಮಕ ಆಡಳಿತವನ್ನು ಸಾಧ್ಯವಾಗಿಸಬೇಕು
4. ಕಾನೂನು ಬಾಹಿರ ನೆಲೆಯಲ್ಲಿ ನಡೆಯುತ್ತಿರುವ ಹಣಕಾಸಿನ ಮತ್ತು ಶಸ್ತ್ರಾಸ್ತ್ರಗಳ ಹರಿವನ್ನು ಮತ್ತು ಸಾಂಸ್ಥೀಕೃತ ಅಪರಾಧಗಳನ್ನು ಗಣನೀಯವಾಗಿ ಕಡಿಮೆಮಾಡಬೇಕು
5. ಎಲ್ಲ ರೀತಿಯ ಭ್ರಷ್ಟಾಚಾರ ಮತ್ತು ಲಂಚಗುಳಿತನವನ್ನು ನಿರ್ಮೂಲನೆ ಮಾಡಬೇಕು
6. ಎಲ್ಲ ಸಾಂಸ್ಥಿಕ ರಚನೆಗಳೂ ಪರಿಣಾಮಕಾರಿಯಾಗಿ, ಉತ್ತರದಾಯಿತ್ವ ಹೊಂದಿ ಪಾರದರ್ಶಕ ನೆಲೆಯಲ್ಲಿ ಕೆಲಸ ನಿರ್ವಹಿಸುವಂತೆ ಮಾಡಬೇಕು
7. ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿ ಅಭಿವೃದ್ಧಿಶೀಲ ದೇಶಗಳ ಭಾಗವಹಿಸುವಿಕೆಯನ್ನು ವಿಸ್ತ್ರುತಗೊಳಿಸಬೇಕು ಮತ್ತು ಸಶಕ್ತಗೊಳಿಸಬೇಕು.
8. ಎಲ್ಲ ದೇಶಗಳಲ್ಲೂ ಪ್ರಜೆಗಳಿಗೆ ಮಾಹಿತಿ ಹಕ್ಕು ಮತ್ತು ಮೂಲಭೂತ ಸ್ವಾತಂತ್ರ ದತ್ತವಾಗುವಂತೆ ಮಾಡಬೇಕು
9. ಹಿಂಸೆ, ಭಯೋತ್ಪಾದನೆ ಮತ್ತು ಅಪರಾಧಗಳನ್ನು ಸಂಪೂರ್ಣವಾಗಿ ತಡೆಗಟ್ಟಬೇಕು ಹಾಗೂ
10. ಜಗತ್ತಿನೆಲ್ಲೆಡೆ ಸುಸ್ಥಿರ ಅಭಿವೃದ್ಧಿಗಾಗಿ ತಾರತಮ್ಯ ರಹಿತವಾದ ನೀತಿಗಳು ಮತ್ತು ಕಾನೂನುಗಳನ್ನು ಜಾರಿಗೆ ತರಬೇಕು

ಸುಸ್ಥಿರ ಅಭಿವೃದ್ಧಿಯ ಗುರಿಗಳಲ್ಲಿ ಒತ್ತು ನೀಡಿರುವ ಮೇಲಿನ ಅಂಶಗಳನ್ನು ಗಮನಿಸಿದಾಗ ಜಗತ್ತಿನ ವಿವಿಧ ಭಾಗಗಳಲ್ಲಿ ಶಾಂತಿ ಸ್ಥಾಪನೆ ಮತ್ತು ಎಲ್ಲರಿಗೂ ನ್ಯಾಯ ದೊರೆಯುವಂತೆ ಮಾಡಬೇಕಾದ ತುರ್ತು ಅಗತ್ಯ ಗಮನಕ್ಕೆ ಬರುತ್ತದೆ. ಸಹಜವಾಗಿಯೇ ಇಂತಹ ವಾತಾವರಣದ ನಿರ್ಮಾಣವು ಸಾಧ್ಯವಾಗಬೇಕಾದರೆ ಸಮುದಾಯಗಳು ಒಟ್ಟಾಗಿ ಮತ್ತು ಪರಸ್ಪರ ಕೊಡುಕೊಳ್ಳುವಿಕೆಯಿಂದ ಇರಬೇಕಾಗುತ್ತದೆ. ಇಂತಹ ಕೊಡುಕೊಳ್ಳುವಿಕೆಯು ಸಾಧ್ಯವಾಗಬೇಕಾದರೆ ಸಮುದಾಯವು ಒಟ್ಟಾಗಿ ಪರಸ್ಪರರ ಸಹಾಯಕ್ಕಾಗಿ ನಿರ್ಮಾಣಮಾಡಿಕೊಳ್ಳುವ ಸಾಂಸ್ಥಿಕ ರಚನೆಗಳ ಅಗತ್ಯವಿದೆ. ಅಂತೆಯೇ ಸಹಕಾರಿ ಸಂಸ್ಥೆಗಳ ಕಡೆಗೆ ಎಲ್ಲರ ಗಮನ ಹರಿಯುತ್ತಿದೆ. ಸಹಕಾರಿ ಸಂಸ್ಥೆಗಳು ಸಮುದಾಯ ಕಾಳಜಿಯನ್ನು ಒಂದು ಪ್ರಮುಖ ತತ್ವವಾಗಿ ಹೊಂದಿರುವ ಮತ್ತು ಸದಸ್ಯ ಸಮುದಾಯದ ಸಂಘಟಿತ ಸಂರಚನೆಯಾಗಿರುವುದರಿಂದ ಎಲ್ಲರ ಏಳಿಗೆ ಮತ್ತು ಎಲ್ಲರಿಗೂ ನ್ಯಾಯ ದೊರೆಯುವ ದಿಸೆಯಲ್ಲಿ ಕಾರ್ಯನಿರ್ವಹಿಸುತ್ತವೆ.

ಶಾಂತಿ, ಸೌಹಾರ್ದತೆ ಮತ್ತು ನ್ಯಾಯುತ ವಾತಾವರಣ ನಿರ್ಮಾಣವಾಗಬೇಕಾದರೆ ಜನರಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯನ್ನು ದೊರಕಿಸಿಕೊಡುವುದು ಅತ್ಯಂತ ಮುಖ್ಯ. ಈ ಹಿನ್ನೆಲೆಯಲ್ಲಿ ಅಂತಾರಾಷ್ಟ್ರೀಯ ಸಹಕಾರಿ ಒಕ್ಕೂಟವು 2009ರಲ್ಲಿ ಠರಾವೊಂದನ್ನು ಸರ್ವಾನುಮತದಿಂದ ಒಪ್ಪಿಕೊಂಡು, ಸಹಕಾರಿ ಸಂಸ್ಥೆಗಳು ತಮ್ಮ ವ್ಯಾಪ್ತಿಯ ಪ್ರದೇಶದಲ್ಲಿನ ಜನಸಮುದಾಯಕ್ಕೆ ಆರ್ಥಿಕ ಭದ್ರತೆ ಒದಗಿಸುವ, ಶಾಂತಿ ಸೌಹಾರ್ದತೆಯ ಸ್ಥಾಪನೆಗೆ ಅನುವಾಗುವ, ಯಾವುದೇ ಬಗೆಯ ಹಿಂಸೆ ನಡೆಯದಂತೆ ಮಾಡುವ ಮತ್ತು ವಿಶೇಷವಾಗಿ ಸದಸ್ಯ ಸಮುದಾಯವು ಸಂತೃಪ್ತಿ ಮತ್ತು

ಸುರಕ್ಷಿತವಾಗಿರುವಂತೆ ಮಾಡುವಂತಹ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕೆಂದು ನಿರ್ಧರಿಸಿದೆ.

**ಸಹಕಾರಿ ಸಂಸ್ಥೆಗಳ ಪಾತ್ರ :**

ಜಗತ್ತಿನಾದ್ಯಂತ ಹಲವಾರು ಸಹಕಾರ ಸಂಘಟನೆಗಳು ಈಗಾಗಲೇ ಸುಸ್ಥಿರ ಅಭಿವೃದ್ಧಿಯ ಬಗೆಗಿನ ಈ ಗುರಿಗೆ ಪೂರಕವಾದ ಚಟುವಟಿಕೆಗಳಲ್ಲಿ ನಿರತವಾಗಿರುವುದನ್ನು ಕಾಣಬಹುದಾಗಿದೆ. ಆಫ್ರಿಕದ ರ್‍ವಾಂಡ ದೇಶದಲ್ಲಿ ಹದಿನಾರು ಜನ ಮಹಿಳೆಯರು ಸೇರಿ ಆರಂಭಿಸಿದ ಬುರಂಗ ಸಹಕಾರಿ ಸಂಘವು ಈ ದಿಸೆಯಲ್ಲಿ ಒಂದು ಉತ್ತಮ ಉದಾಹರಣೆ. ರ್‍ವಾಂಡ ದೇಶದಲ್ಲಿ ಆಂತರಿಕ ಸಮುದಾಯ ಕಲಹದಿಂದಾಗಿ 1994ರಲ್ಲಿ ಸುಮಾರು ಹತ್ತು ಲಕ್ಷ ಜನ ಕೊಲ್ಲಲ್ಪಟ್ಟರು. ಹೊಡೆದಾಟದಲ್ಲಿ ತೊಡಗಿದ ಎರಡೂ ಸಮುದಾಯದ ಜನ ಕಷ್ಟ ಸಂಕಷ್ಟಗಳಿಗೆ ಒಳಗಾದರು. ಸ್ನೇಹಿತರು, ಒಂದೇ ಕುಟುಂಬದವರು ಸಹ ಪರಸ್ಪರ ಹೊಡೆದಾಡಿ ಸಾಯುವಂಥ ಭೀಕರ ಪರಿಸ್ಥಿತಿ ಅಲ್ಲಿ ನೆಲೆಸಿತ್ತು. ಇಂತಹ ಸಂದರ್ಭದಲ್ಲಿ ಹೊಡೆದಾಡುತ್ತಿದ್ದ ಎರಡೂ ಸಮುದಾಯದ ಸದಸ್ಯರನ್ನೇ ಸೇರಿಸಿ ಆರಂಭಿಸಿದ ಈ ಸಹಕಾರಿ ಸಂಘವು ಕಲೆ ಮತ್ತು ಕುಶಲ ಸಾಮಗ್ರಿಗಳ ಮೂಲಕ ಹಲವು ಕುಟುಂಬಗಳಿಗೆ ಆರ್ಥಿಕ ಭದ್ರತೆ ಒದಗಿಸುವುದರ ಜೊತೆಗೆ, ಎರಡೂ ಸಮುದಾಯದ ಜನಗಳ ನಡುವೆ ಮಾತುಕತೆಗಳು ನಡೆದು, ಸೌಹಾರ್ದಯುತ ವಾತಾವರಣ ನಿರ್ಮಾಣವಾಗಿ ತಮ್ಮ ಪರಿಸರದಲ್ಲಿ ಸಾಮಾಜಿಕ ಭದ್ರತೆ ನೆಲೆಸುವಂತೆ ಮಾಡುವಲ್ಲಿಯೂ ಉತ್ತಮ ಸೇವೆ ಸಲ್ಲಿಸಿದೆ.

ಯೂರೋಪ್‌ನ ಬೋಸ್ನಿಯದಲ್ಲಿ ಇಟಲಿಯ ಸಹಕಾರಿ ಸಂಘಟನೆಯ ಸಹಾಯದಿಂದ ಆರಂಭಿಸಿದ ಬಹು ಜನಾಂಗೀಯ ಕೃಷಿ ಸಹಕಾರಿ ಸಂಘವೂ ಇಂತಹುದೇ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ತೊಂಭತ್ತರ ದಶಕದ ಆರಂಭದಲ್ಲಿ ಬೋಸ್ನಿಯ ಮತ್ತು ಯುಗೋಸ್ಲೋವಿಯಾ ದೇಶಗಳ ನಡುವೆ ನಡೆದ ಜನಾಂಗೀಯ ಆಂದೋಲನದಲ್ಲಿ ಹಿಂಸಾಚಾರ ನಡೆದು, ಸಮುದಾಯಗಳ ನಡುವೆ ವೈಮನಸ್ಯ ಹೆಚ್ಚಾಗಿ ಸಾಮಾಜಿಕ ಅಶಾಂತಿ ನೆಲೆಸಿದ್ದ ಸಂದರ್ಭದಲ್ಲಿ, ಈ ಸಹಕಾರಿ ಸಂಘವು ಸಾಮೂಹಿಕ ನೆಲೆಯಲ್ಲಿ ಕೃಷಿ ಚಟುವಟಿಕೆಗಳನ್ನು ಸಂಘಟಿಸುತ್ತಾ ಸ್ಥಳೀಯ ಸಮುದಾಯಗಳಿಗೆ ಆರ್ಥಿಕ ಆಸರೆ ನೀಡಿದುದರ ಜೊತೆಗೆ, ಕಲಹದಲ್ಲಿ ನಿರತರಾಗಿದ್ದ ವಿವಿಧ ಜನಾಂಗದ ಜನರನ್ನೇ ಒಟ್ಟು ಸೇರಿಸಿ, ಅವರುಗಳು ಒಟ್ಟಾಗಿ ಆರ್ಥಿಕ ಚಟುವಟಿಕೆಗಳಲ್ಲಿ ನಿರತರಾಗುವಂತೆ ಹಾಗೂ ಈ ಪ್ರಕ್ರಿಯೆಯ ಜೊತೆಗೇ ಪರಸ್ಪರ ಮಾತುಕತೆಯ ಮೂಲಕ ತಮ್ಮ ಅನುಮಾನಗಳು ಮತ್ತು ಅಪನಂಬಿಕೆಗಳನ್ನು ತೊಡೆದು ಸೌಹಾರ್ದಯುತವಾಗಿ ಬಾಳುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ. ಇದೇ–ರೀತಿ ಆಂತರಿಕ ಕಲಹ ಮತ್ತು ಸಮುದಾಯಗಳ ನಡುವಿನ ಹಿಂಸಾಚಾರಗಳು ನಡೆಯುತ್ತಿರುವ ಗ್ವಾಟೆಮಾಲ ಮತ್ತು ಸಿರಿಯ ದೇಶಗಳಲ್ಲಿ ಕೂಡ ಸಹಕಾರಿ ಸಂಘಟನೆಗಳು ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಒದಗಿಸುವ ಮೂಲಕ ಜನಾಂಗೀಯ ಕಲಹದಿಂದಾಗಿ ಪರಸ್ಪರ ನಂಬಿಕೆ ಕಳೆದುಕೊಂಡ ಸಮುದಾಯದ ಪ್ರತಿನಿಧಿಗಳನ್ನು ಒಟ್ಟು ಸೇರಿಸಿ, ಪರಸ್ಪರ ಸಹಯೋಗದಲ್ಲಿ ಆರ್ಥಿಕ ಚಟುವಟಿ–ಕೆಗಳನ್ನು ನಡೆಸುವಂತೆ ಮಾಡುತ್ತಾ ಪರೋಕ್ಷವಾಗಿ ಶಾಂತಿ ಮತ್ತು ನ್ಯಾಯಯುತ ಸಮಾಜದ ನಿರ್ಮಾಣ ಕಾರ್ಯದಲ್ಲಿ ತೊಡಗಿವೆ.

ಹೀಗೆಯೇ ಮಾನವ ಕಳ್ಳಸಾಗಾಣಿಕೆಗೆ ಸಿಲುಕಿ ಯಾವುದೋ ದೇಶದಲ್ಲಿ ಅನಾಥವಾಗಿ, ಅನಧಿಕೃತವಾಗಿ ಇರಬೇಕಾಗಿ ಬಂದವರು, ಒಂದು ದೇಶದಿಂದ ಇನ್ನೊಂದು ದೇಶಕ್ಕೆ ನಿರಾಶ್ರಿತರಾಗಿ ಹೋದವರು ಮುಂತಾದವರಿಗೆ ಕೂಡ ಸಹಕಾರಿ ಸಂಸ್ಥೆಗಳು ಸಹಾಯ ಮಾಡುತ್ತಿರುವುದನ್ನು ಕಾಣಬಹುದು. ಇತ್ತೀಚಿನ ಒಂದು ಉದಾಹರಣೆ ಎಂದರೆ ಬರ್ಮಾ ದೇಶದಿಂದ ಬಾಂಗ್ಲಾದೇಶಕ್ಕೆ ನಿರಾಶ್ರಿತವಾಗಿ ಬಂದಿರುವ ರೊಹಿಂಗ್ಯಾ ಸಮುದಾದಯದ ಜನರಿಗೆ ಭದ್ರತೆ ಒದಗಿಸುವ ನೆಲೆಯಲ್ಲಿ ರೊಹಿಂಗ್ಯಾ ಮಹಿಳೆಯರನ್ನು ಸೇರಿಸಿ ಒಂದು ಉತ್ಪಾದಕ ಸಹಕಾರಿ ಸಂಘವನ್ನು ಸ್ಥಾಪಿಸಲಾಗಿದ್ದು, ಈ ಸಹಕಾರಿ ಸಂಘವು ಮಹಿಳೆಯ–ರಿಗೆ ಹೊಲಿಗೆ ತರಬೇತಿ ನೀಡಿ, ಅವರಿಂದ ಸಿದ್ಧ ಉಡುಪುಗಳನ್ನು ತಯಾರಿಸಿ ಮಾರುತ್ತಾ, ಈ ನಿರಾಶ್ರಿರು ಕೇವಲ ಸರಕಾರ ನೀಡುವ ಅನ್ನಾಹಾರವನ್ನೇ ಅವಲಂಬಿಸುವ ಬದಲಿಗೆ, ತಾವೇ ದುಡಿಯುತ್ತ, ಸ್ವಾವಲಂಬಿಗಳಾಗಿ ಹೆಚ್ಚಿನ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಪಡೆಯಲು ಕಾರಣವಾಗಿದೆ.

ಮೇಲೆ ತಿಳಿಸಿದ ಎಲ್ಲ ಗುರಿಗಳು ಮತ್ತು ಜಾಗತಿಕ ನೆಲೆಯಲ್ಲಿ ಹಲವು ಸಹಕಾರಿ ಸಂಘಗಳ ಚಟುವಟಿಕೆಗಳ ಆದಾರದಲ್ಲಿ, ನಮ್ಮ ಸಹಕಾರಿ ಸಂಘಗಳು ಗಮನಿಸಬೇಕಾದ ಕೆಲವು ಅಂಶಗಳು ಮತ್ತು ಕೈಗೆತ್ತಿಕೊಳ್ಳಬಹುದಾದ ಚಟುವಟಿ–ಕೆಗಳನ್ನು ಈ ಕೆಳಗೆ ಪಟ್ಟಿಮಾಡಲಾಗಿದೆ.

1. ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯು ಶಾಂತಿಯುತ ಮತ್ತು ನ್ಯಾಯಯುತ ಸಮಾಜದ ಬುನಾದಿ ಎಂಬುದನ್ನು ಅರಿಯಬೇಕು.
2. ಸಹಕಾರಿ ಸಂಘಗಳು ತಮ್ಮ ಭೌಗೋಳಿಕ ಮತ್ತು ಕಾರ್ಯ ವ್ಯಾಪ್ತಿಯ ನೆಲೆಯಲ್ಲಿ ಸದಸ್ಯ ಸಮುದಾಯದ ಎಲ್ಲ ಸದಸ್ಯರಿಗೆ ಆರ್ಥಿಕ ಮತ್ತು ಸಾಮಾಜಿಕ ಶಕ್ತಿ ನೀಡುವಂತಹ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು
3. ಸಮುದಾಯದಲ್ಲಿ ವಿವಿಧ ಕಾರಣಗಳಿಂದಾಗಿ ಪ್ರತ್ಯೇಕವಾದವರು, ಶೋಷಣೆಗೊಳಗಾದವರು ಮತ್ತು ನಿರಾಶ್ರಿತರಾದವರನ್ನು ಗುರುತಿಸಿ ಅವರಿಗೆ ಸ್ವಾವಲಂಬಿಕಗಳಾಗಿ ಬದುಕುವ ಮಾರ್ಗವನ್ನು ಒದಗಿಸಿಕೊಡುವಂತಹ ಯೋಜನೆಗಳನ್ನು ಆರಂಭಿಸಬಹುದು
4. ಮಕ್ಕಳು, ಮಹಿಳೆಯರು ಮತ್ತು ಸಾಮಾಜಿಕ ನೆಲೆಯಲ್ಲಿ ಅಂಚಿನಲ್ಲಿರುವ ಜನರ ಅಗತ್ಯಗಳನ್ನು ಗುರುತಿಸಿ ಅವುಗಳನ್ನು ಸಹಕಾರಿ ಸಂಘಗಳ ಮೂಲಕ ಹೇಗೆ ಒದಗಿಸಬಹದೆಂಬ ಬಗ್ಗೆ ಯೋಚಿಸಿ ಕಾರ್ಯ ತಂತ್ರಗಳನ್ನು ರೂಪಿಸಬಹುದು
5. ತಮ್ಮ ಪರಿಸರದಲ್ಲಿ ಯಾವುದೇ ಹಿಂಸಾಚಾರ, ಸಮುದಾಯಗಳ ನಡುವಿನ ಅಪನಂಬಿಕೆ, ಶೋಷಣೆ ಮುಂತಾದುವುಗಳು ನಡೆಯುವುದು ಗಮನಕ್ಕೆ ಬಂದಾಗ ಅದನ್ನು ಕಡಿಮೆ ಮಾಡುವ ಕುರಿತಂತೆ ವಿವಿಧ ಸಂಘಟನೆಗಳಿಗೆ ಸಹಕರಿಸಬಹುದು
6. ದೇಶದ ಕಾನೂನಿನನ್ವಯ ಎಲ್ಲರಿಗೂ ಲಭ್ಯವಾಗುವ ಸಾಮಾನ್ಯ ಅವಕಾಶಗಳು ಮತ್ತು ಸವಲತ್ತುಗಳಿಂದ ಯಾರಾದರೂ ವಂಚಿತರಾಗುತ್ತಿದ್ದಲ್ಲಿ, ಅಂತಹ ಜನರಿಗೆ ಸಹಾಯಮಾಡುವ ಚಟುವಟಿ–ಕೆಗಳನ್ನು ಹಮ್ಮಿಕೊಳ್ಳಬಹುದು
7. ಅಂತಾರಾಷ್ಟ್ರೀಯ ನೆಲೆಯಲ್ಲಿ ನಡೆಯುತ್ತಿರುವ ಭಯೋತ್ಪಾದನೆ, ಮಾನವ ಕಳ್ಳಸಾಗಣೆ, ಮುಗ್ಧ ಜನರನ್ನು ಮೋಸಗೊಳಿಸುವ ಯಾವುದೇ ಚಟುವಟಿಕೆಗಳು ಗಮನಕ್ಕೆ ಬಂದರೆ ಅವುಗಳನ್ನು ಸೂಕ್ತ ಮೂಲಗಳಿಗೆ ತಿಳಿಸಬಹುದು ಹಾಗೂ ಅಂತಹ ಚಟುವಟಿಕೆಗಳಿಂದಾಗಿ ಕಷ್ಟಕ್ಕೆ ಸಿಲುಕಿರುವವರಿಗೆ ತಾತ್ಕಾಲಿಕ ಆಶ್ರಯ ದೊರೆಯುವಂಥ ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದು, ಸಹಾಯ ನೀಡುವುದು ಮತ್ತು ಸಾಧ್ಯವಾದಾಗ ತಾವೇ ಅಂತಹ ಕಾರ್ಯಕ್ರಮಗಳನ್ನು ಆರಂಭಿಸುವ ಕೆಲಸ ಮಾಡಬಹುದು.

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 32
Licensed to post without Prepayment License No. PMG BG/WPP-384/2020-2022.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

## ಆಡಳಿತ ಮಂಡಳಿ ಸದಸ್ಯರು

**ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಶ್ರೀ ಬಸವರಾಜು ಬೊಮ್ಮಾಯಿ ಯವರನ್ನು, ಸಹಕಾರ ಸಚಿವರಾದ ಶ್ರೀ ಎಸ್. ಟಿ ಸೋಮಶೇಖರ್ ರವರನ್ನು ಹಾಗೂ ಮಂತ್ರಿ ಮಂಡಳದ ಎಲ್ಲಾ ಸಚಿವರಿಗೆ ಹಾರ್ದಿಕ ಅಭಿನಂದನೆಗಳು.**



ಬಿ.ಹೆಚ್. ಕೃಷ್ಣಾರೆಡ್ಡಿ, ಅಧ್ಯಕ್ಷರು | ಜಗದೀಶ ಕವಟಗಿಮಠ, ಉಪಾಧ್ಯಕ್ಷರು | ಗುರುನಾಥ ಜಾಂತಿಕರ, ನಿರ್ದೇಶಕರು | ಹೆಚ್.ವಿ. ರಾಜೀವ್, ನಿರ್ದೇಶಕರು | ವಿಶ್ವನಾಥ ಚ. ಹಿರೇಮಠ, ನಿರ್ದೇಶಕರು | ಎಸ್.ಆರ್. ಲಕ್ಷ್ಮೀಕಾಂತರೆಡ್ಡಿ, ನಿರ್ದೇಶಕರು



ಮಾರುತಿ ಬಿ. ಕಲಾಲ, ನಿರ್ದೇಶಕರು | ಗುರುನಗೌಡ ಪಾಟೀಲ, ನಿರ್ದೇಶಕರು | ವಾಯ್. ಟಿ. ಪಾಟೀಲ, ನಿರ್ದೇಶಕರು | ಜಿ. ನಂಜನಗೌಡ, ನಿರ್ದೇಶಕರು | ಬಿ. ಗಂಗಾಧರಯ್ಯ, ನಿರ್ದೇಶಕರು | ಸಿದ್ರಾಮಪ್ಪ ಉಪ್ಪಿನ, ನಿರ್ದೇಶಕರು



ಎ.ಆರ್. ಪ್ರಸನ್ನಕುಮರ್, ನಿರ್ದೇಶಕರು | ಆರ್. ತಿಮ್ಮಯ್ಯಶೆಟ್ಟಿ, ನಿರ್ದೇಶಕರು | ಸಂಜೀವ ಮಹಾಜನ, ನಿರ್ದೇಶಕರು | ಜಿ. ಶ್ರೀಧರ, ನಿರ್ದೇಶಕರು | ಬಿ.ಎಸ್. ಗುಂಡುರಾವ್, ನಿರ್ದೇಶಕರು | ಮಂಜುನಾಥ, ನಿರ್ದೇಶಕರು



ಶ್ರೀಮತಿ ಸರಸ್ವತಿ, ನಿರ್ದೇಶಕರು | ಲಕ್ಷ್ಮಣ ಮಾರುತಿ ಪವಾರ್, ವೃತ್ತಿಪರ ನಿರ್ದೇಶಕರು | ಸದಾಶಿವ ಶೆಟ್ಟಿ, ವೃತ್ತಿಪರ ನಿರ್ದೇಶಕರು | ಶರಣಗೌಡ ಜಿ. ಪಾಟೀಲ, ವ್ಯವಸ್ಥಾಪಕ ನಿರ್ದೇಶಕರು

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34

ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.

ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299

ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.

ಕಲಬುರಗಿ ಪಾಂತೀಯ ಕಛೇರಿ: ಡಾ. ಎನ್. ಎಸ್. ಪಾಟೀಲ, ಶಿವಶರಣ ನಿಲಯ, ದೇವತಾ ಆಸ್ಪತ್ರೆ ಎದುರುಗಡೆ, ಖೂಬಾ ಪ್ಲಾಟ್, ಕಲಬುರಗಿ – 585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010